

ಭಾಗ್ಯವನ್ನು ಬರೆಯುವ ಲೇಖನಿ

# ಕರ್ಮ

**ಪ್ರಥಮ ಆವೃತ್ತಿ:** ಫೆಬ್ರವರಿ 2014, 2000 ಪ್ರತಿಗಳು

**ಲೇಖನ ಮತ್ತು ಚಿತ್ರಗಳು:**
ಬ್ರಹ್ಮಾಕುಮಾರ ಬುರಹಾನುದ್ದೀನ್ ಅಲಿ
ಅಬು ರೋಡ್, ರಾಜಸ್ಥಾನ

**ಅನುವಾದ:** ಬಿ.ಕೆ.ಶೀಲ

**ಪ್ರಕಾಶಕರು:**
ಹೆಲ್ದಿ ವೆಲ್ದಿ ಹ್ಯಾಪಿ ಕ್ಲಬ್, ಅಹ್ಮದಾಬಾದ್
healthywealthyhappyclub@gmail.com

**ಮುದ್ರಕರು:**
ಅಂಬಾ ಆಫ್‌ಸೆಟ್, ಅಹ್ಮದಾಬಾದ್

**ಪುಸ್ತಕಗಳು ದೊರೆಯುವ ಸ್ಥಳ:**
ಫರಿಶ್ತಾ ಕಲೆಕ್ಷನ್, ಶಾಂತಿವನದ ಎದುರು, ಅಬು ರೋಡ್

**ದೂರವಾಣಿ:** 098284–28024

© copyright: 'Healthy Wealthy Happy Club', Ahmedabad.
No part of this book may be printed or used through any other mode without the permission of the publisher.

# ಪೀಠಿಕೆ

ಇಚಿದು ನಾವು ಯುಗ ಪರಿವರ್ತನೆಯ ಕಾಲದಲ್ಲಿ ಸಾಗುತ್ತಿದ್ದೇವೆ. ಈಗ ಕಲಿಯುಗವು ಸಮಾಪ್ತಿಯಾಗಿ ಸತ್ಯಯುಗವು ಪ್ರಾರಂಭವಾಗುತ್ತದೆ. ಈ ಪಾವನ ಸಮಯಕ್ಕೆ ಸಂಗಮಯುಗ ಎನ್ನಲಾಗುತ್ತದೆ. ಸ್ವಯಂ ಪರಮಾತ್ಮನು ಈ ಧರೆಗೆ ಅವತರಿಸುವ ಮತ್ತು ಮನುಷ್ಯಾತ್ಮರನ್ನು ಪಾವನ ಮಾಡಿ ಸತ್ಯಯುಗದ ಪುನರ್‌ಸ್ಥಾಪನೆಯನ್ನು ಮಾಡುವ ಸಮಯವು ಇದೇ ಆಗಿದೆ.

ಪರಮಾತ್ಮನು ಜ್ಞಾನಸಾಗರನಾಗಿದ್ದಾರೆ. ಮತ್ತು ಈ ಸಮಯದಲ್ಲಿ ಅವರು ನಮಗೆ ನೀಡುತ್ತಿರುವ ಮುಖ್ಯ ಶಿಕ್ಷಣಗಳಲ್ಲಿ ಕರ್ಮಗಳ ಗುಹ್ಯಗತಿಯ ಜ್ಞಾನವೂ ಒಂದು. ನಮ್ಮ ಜೀವನದಲ್ಲಿ ಅನೇಕ ಘಟನೆಗಳು ನಡೆಯುತ್ತವೆ. ಅವುಗಳಲ್ಲಿ ಕೆಲವು ಒಳ್ಳೆಯವು, ಮತ್ತೆ ಕೆಲವು ಕೆಟ್ಟವು. ಸಾಮಾನ್ಯವಾಗಿ ಮನುಷ್ಯನು ಇದನ್ನು ಪರಮಾತ್ಮನ ಇಚ್ಛೆ ಎಂದು ತಿಳಿಯುತ್ತಾನೆ. ಅವನಿಗೆ ಒಳ್ಳೆಯದಾದರೆ ಪರಮಾತ್ಮನಿಗೆ ಧನ್ಯವಾದ ಹೇಳುತ್ತಾನೆ. ಮತ್ತು ಕೇಡಾದರೆ ಎಲ್ಲ ದೋಷವನ್ನು ಪರಮಾತ್ಮನ ಮೇಲೆ ಹೊರಿಸಿಬಿಡುತ್ತಾನೆ. ಈ ಸಂದರ್ಭದಲ್ಲಿ ಪರಮಾತ್ಮನು ನಮಗೆ ಶಿಕ್ಷಣ ನೀಡಿರುವಂತೆ ಮನುಷ್ಯನು ತನ್ನ ಜೀವನದಲ್ಲಿ ನಡೆಯುವ ಘಟನೆಗಳಿಗೆ ತಾನೇ ಹೊಣೆಗಾರನಾಗುತ್ತಾನೆ ಹೊರತು ಪರಮಾತ್ಮನಲ್ಲ. ಮನುಷ್ಯನು ಎಂತಹ ಕರ್ಮ ಮಾಡುವನೋ ಅಂತಹ ಫಲವು ಅವನಿಗೆ ದೊರೆಯುತ್ತದೆ. ಪರಮಾತ್ಮನು ಯಾರದೇ ಜೀವನದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅವರಂತೂ ಸುಖದ ಸಾಗರ. ಎಂದಾಗ ಅವರು ಯಾರಿಗಾದರೂ ದುಃಖ ನೀಡುವುದುಂಟೇ?

ಈ ಅತ್ಯವಶ್ಯಕ ವಿಷಯವನ್ನು ಈ ಪುಸ್ತಕದಲ್ಲಿ ಒಂದು ಸುಂದರ ಕಥೆಯ ರೂಪದಲ್ಲಿ ನಿರೂಪಿಸಲಾಗಿದೆ. ಇದರಲ್ಲಿ ಕರ್ಮಸಿದ್ಧಾಂತದ ಗುಹ್ಯ ರಹಸ್ಯಗಳ ಜೊತೆಗೆ ಪರಮಾತ್ಮನ ಮೂಲಕ ಪ್ರಾಪ್ತಿಯಾಗಿರುವ ಇತರ ಶಿಕ್ಷಣಗಳನ್ನೂ ಪ್ರಸ್ತಾಪಿಸಲಾಗಿದೆ. ಇವುಗಳಲ್ಲಿ ಪ್ರಮುಖವಾದವು ಆತ್ಮಜ್ಞಾನ, ಪರಮಾತ್ಮನ ಸತ್ಯ ಪರಿಚಯ, ರಾಜಯೋಗ, ಕಾಲಚಕ್ರ ಇತ್ಯಾದಿ.

ಈ ಪುಸ್ತಕವನ್ನು ಓದುವುದರಿಂದ ತಮ್ಮ ಜೀವನದಲ್ಲಿ ಸಕಾರಾತ್ಮಕ ಪರಿವರ್ತನೆ ಮತ್ತು ತಮ್ಮ ವಿಚಾರಧಾರೆಯಲ್ಲಿ ಅಪೂರ್ವ ಬದಲಾವಣೆ ಬರುವುದೆಂಬುದು ನಮ್ಮ ಆಶಯವಾಗಿದೆ. ಜೊತೆಗೆ ಮನುಷ್ಯನು ತನ್ನ ಕರ್ಮವೆಂಬ ಲೇಖನಿಯಿಂದ ಹೇಗೆ ತನ್ನ ಭಾಗ್ಯವನ್ನು ಬರೆದುಕೊಳ್ಳುತ್ತಾನೆ ಎಂಬುದನ್ನು ಅರಿತುಕೊಳ್ಳುವಿರಿ.

ಈ ಪುಸ್ತಕದಿಂದ ತಾವೂ ಲಾಭ ಪಡೆದು ತಮ್ಮ ಮಿತ್ರಸಂಬಂಧಿಗಳಿಗೂ ಈ ಪುಸ್ತಕವನ್ನು ಕಾಣಿಕೆಯಾಗಿ ನೀಡಿ ಈ ಶ್ರೇಷ್ಠ ಜ್ಞಾನದಿಂದ ಅವರಿಗೂ ಲಾಭವಾಗುವಂತೆ ಮಾಡುವಿರೆಂದು ಹಾರೈಸುತ್ತೇವೆ.

**– ಬಿ.ಕೆ.ಲಲಿತ್ ಈನಾಣಿ**



# ಭಾಗ್ಯವನ್ನು ಬರೆಯುವ ಲೇಖನಿ – ಕರ್ಮ

ಭಾರತದ ಕೈಗಾರಿಕಾ ರಾಜಧಾನಿ ಮುಂಬೈ ನಗರದಲ್ಲಿ ಒಂದು ದರ್ಜೆಯವರು ಗಗನಚುಂಬಿ ಕಟ್ಟಡಗಳಲ್ಲಿದ್ದರೆ ಇನ್ನೊಂದು ದರ್ಜೆಯವರು ಗುಡಿಸಲುಗಳ ಪ್ರದೇಶದಲ್ಲಿರುತ್ತಾರೆ. ಇಂತಹ ಗುಡಿಸಲುಗಳ ಪ್ರದೇಶವೊಂದರಲ್ಲಿ ಒಂದು ಚಿಕ್ಕ ಗುಡಿಸಲೊಂದರಲ್ಲಿ 7 ವರ್ಷದ ಬಿರಜೂ ಎಂಬ ಬಾಲಕನು ತನ್ನ ತಾಯಿಯೊಂದಿಗೆ ಇರುತ್ತಿದ್ದನು. ಆತನ ತಂದೆ ತುಂಬಾ ಮುಂಚೆಯೇ ಸತ್ತುಹೋಗಿದ್ದನು. ಆತನ ಪಾಲನೆ ಪೋಷಣೆಯನ್ನು ಅವನ ತಾಯಿಯೇ ಮಾಡುತ್ತಿದ್ದಳು. ಬಿರಜೂನ ತಾಯಿ ಸಮೀಪದ ಕಟ್ಟಡ ನಿರ್ಮಾಣ ಕೆಲಸದಲ್ಲಿ ಕೂಲಿ ಕೆಲಸ ಮಾಡುತ್ತಿದ್ದಳು.

ಒಂದು ದಿನ ಎಂದಿನಂತೆ ಬಿರಜೂ ತನ್ನ ತಾಯಿಯ ಜೊತೆ ಕಟ್ಟಡ ನಿರ್ಮಾಣ ಕೆಲಸವಿರುವಲ್ಲಿ ಹೊರಟಿದ್ದನು. ಅಂದು ತನ್ನ ಜೀವನದಲ್ಲಿ ಮೇರೆಯಿಲ್ಲದ ದುಃಖದ ಘಟನೆಯೊಂದು ನಡೆಯಲಿದೆ ಎಂಬುದು ಆತನಿಗೆ ಅರಿವಿರಲಿಲ್ಲ. ರಸ್ತೆ ದಾಟುವಾಗ ಆತನು ರಸ್ತೆಯ ಇನ್ನೊಂದು ಮಗ್ಗುಲಲ್ಲಿ ಬಲೂನು ಮಾರುವವನನ್ನು ಕಂಡನು. ಖುಷಿಯಿಂದ ಆತನು ತನ್ನ ತಾಯಿಯ ಕೈಬಿಟ್ಟು ವಾಹನಗಳಿಂದ ಕಿಕ್ಕಿರಿದ ರಸ್ತೆಯಲ್ಲಿ ಓಡತೊಡಗಿದನು. ಆತನ ತಾಯಿಯೂ ಸಹ ಗಾಬರಿಯಿಂದ ಬಿರಜೂನನ್ನು ರಕ್ಷಿಸಲು ಆತನ ಹಿಂದೆ ಓಡತೊಡಗಿದಳು. ಆಗ ತಕ್ಷಣವೇ ಒಂದು ಗಟ್ಟಿಯಾದ ಕೂಗಿನಿಂದ ಇಡೀ ವಾತಾವರಣವು ಸ್ತಬ್ದವಾಯಿತು. ಆ ಧ್ವನಿ ಬಿರಜೂನದಾಗಿರದೆ ಆತನ ತಾಯಿಯದಾಗಿತ್ತು. ಬಿರಜೂ ಹಿಂತಿರುಗಿ ತನ್ನ ತಾಯಿಯ ಶರೀರವು ರಕ್ತಸಿಕ್ತವಾಗಿ ರಸ್ತೆಯ ಮೇಲೆ ಬಿದ್ದಿರುವುದನ್ನು ಕಂಡನು. ಬಿರಜೂ ಅಳುತ್ತ ತನ್ನ ತಾಯಿಯ ಬಳಿ ಓಡಿದನು. ಅಂದು ಬಿರಜೂ ಸಂಪೂರ್ಣ ಏಕಾಂಗಿಯಾಗಿಬಿಟ್ಟಿದ್ದನು. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಆತನು ಅನಾಥನಾಗಿಬಿಟ್ಟಿದ್ದನು. ಆತನ ಒಂದು ತುಂಟತನದ ಕಾರಣದಿಂದ ಅಂದು ಆತನ ತಾಯಿ ಆತನಿಂದ ದೂರವಾಗಿದ್ದಳು. ಈಗ ಆತನಿಗೆ ಪ್ರಪಂಚದಲ್ಲಿ ತನ್ನವರೆನ್ನುವವರು ಯಾರೂ ಇರಲಿಲ್ಲ.

ಮುಂಚೆ ತುಂಬಾ ತುಂಟತನ ಮಾಡುತ್ತಿದ್ದವನು ತಾಯಿ ತಂದೆಯನ್ನು ಕಳೆದುಕೊಂಡನಂತರ ಆತನ ನಿರಾಶೆಗೆ ಪಾರವೇ ಇರಲಿಲ್ಲ. ಜೀವನವು ಅವನಿಗೆ ಒಂದು ಶಾಪವಾಗಿ ಪರಿಣಮಿಸಿತ್ತು. ಅವನು ತನ್ನ ಹೊಟ್ಟೆಯನ್ನು ತಾನೇ ತುಂಬಿಸಿಕೊಳ್ಳಬೇಕಿತ್ತು.



ಅಸಹಾಯಕನಾದ ಬಿರಜೂ ಕೆಲವು ದಿನಗಳವರೆಗೆ ತನ್ನ ಗುಡಿಸಲಲ್ಲಿ ನಿರಾಶೆಯಿಂದ ಕುಳಿತಿದ್ದನು. ಅಷ್ಟು ದಿನ ಆತನು ಏನನ್ನೂ ತಿನ್ನಲಿಲ್ಲ. ಆದರೆ ಈ ರೀತಿ ಎಷ್ಟು ದಿನ ಇರಲು ಸಾಧ್ಯ? ಕೊನೆಗೂ ಆತನು ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಚಹಾದ ಅಂಗಡಿಯೊಂದರಲ್ಲಿ ಕೆಲಸ ಮಾಡತೊಡಗಿದನು. ಆ ಅಂಗಡಿಯ ಮಾಲೀಕನು ತುಂಬಾ ಸಿಡುಕಿನ ಸ್ವಭಾವದವನಾಗಿದ್ದನು. ಚಿಕ್ಕಪುಟ್ಟ ಮಾತುಗಳಿಗೂ ಆತನು ಬಿರಜೂನನ್ನು ಗದರಿಸುತ್ತಿದ್ದನು ಮತ್ತು ಹೊಡೆಯುತ್ತಿದ್ದನು. ಒಂದು ದಿನ ಬಿರಜೂನ ಕೈತಪ್ಪಿ ಚಹಾದ ಲೋಟವು ಬಿದ್ದು ಒಡೆದುಹೋಯಿತು. ಮತ್ತೇನು, ಅಂಗಡಿಯ ಮಾಲೀಕನು ಆತನ್ನು ನಿರ್ದಯೆಯಿಂದ ಹೊಡೆದನು, ಎಳೆಯ ವಯಸ್ಸಿನ ಬಿರಜೂ ಮತ್ತೆ ಏನು ತಾನೆ ಮಾಡಿಯಾನು. ಆತನು ಕೇವಲ ಕ್ಷಮೆ ಬೇಡಿದನು. ಈ ರೀತಿ ಆತನ ಬಾಲ್ಯವು ಗುಲಾಮಗಿರಿಯಲ್ಲಿಯೇ ಕಳೆಯಿತು.

ಒಂದು ರಾತ್ರಿ ಬಿರಜೂ ತನ್ನ ಗುಡಿಸಲಿಗೆ ಹಿಂತಿರುಗಿದಾಗ ನೋಡಿದರೆ ಪಕ್ಕದ ಮನೆಯವನು ಆತನ ಗುಡಿಸಲನ್ನು ಆಕ್ರಮಿಸಿಬಿಟ್ಟಿದ್ದನು. ಬಿರಜೂ ಅಳುತ್ತ ಆ ವ್ಯಕ್ತಿಗೆ ಅಂಗಾಲಾಚಿ ಬೇಡಿಕೊಂಡನು. ಆದರೆ ಆ ಮನುಷ್ಯ ದೃಢ ನಿರ್ಧಾರ ಮಾಡಿದ್ದನು. ಆತನು ಬಿರಜೂನನ್ನು ಚೆನ್ನಾಗಿ ಹೊಡೆದು, ಬೆದರಿಸಿ ಅಲ್ಲಿಂದ ಓಡಿಸಿಬಿಟ್ಟನು. ಈಗ ಬಿರಜೂ ಮನೆಯನ್ನೂ ಕಳೆದುಕೊಂಡುಬಿಟ್ಟಿದ್ದನು. ಅಂದಿನಿಂದ ಆತನು ರಸ್ತೆಯ ಬದಿಯಲ್ಲಿಯೇ ವಾಸಿಸತೊಡಗಿದನು.

ಬಿರಜೂನನ್ನು ಎಲ್ಲರೂ ಅನಿಷ್ಟ ಎಂದೇ ಭಾವಿಸಿದ್ದರು. ಏಕೆಂದರೆ ಆತನು ಹುಟ್ಟಿದ ಕೆಲವೇ ದಿನಗಳಲ್ಲಿ ಆತನ ತಂದೆ ಸತ್ತುಹೋಗಿದ್ದನು. ಚಿಕ್ಕಂದಿನಲ್ಲಿಯೇ ತಾಯಿಯೂ ದೂರವಾಗಿದ್ದಳು. ಆತನೊಂದಿಗೆ ಸ್ನೇಹದಿಂದಿರಲು ಯಾರೂ ಇಷ್ಟಪಡುತ್ತಿರಲಿಲ್ಲ. ಬಿರಜೂನ ಜೀವನದಲ್ಲಿ ಪ್ರತಿದಿನವೂ ಒಂದಲ್ಲ ಒಂದು ಕಷ್ಟವು ಎದುರಾಗುತ್ತಿತ್ತು.

ಇಂತಹ ದುಃಖ ತುಂಬಿದ ಜೀವನದ ಕಾರಣವೇ ಆತನು ಸಿಡುಕು ಸ್ವಭಾವದವನಾಗಿದ್ದನು. ಪ್ರತಿದಿನವೂ ಆತನು ತನ್ನ ದೌರ್ಭಾಗ್ಯಕ್ಕಾಗಿ ಅಳುತ್ತಿದ್ದನು ಮತ್ತು ಭಗವಂತನನ್ನು ನಿಂದಿಸುತ್ತಿದ್ದನು. ತನಗೆ ಏನೆಲ್ಲ ಆಯಿತೋ ಅದಕ್ಕೆ ಭಗವಂತನೇ ಕಾರಣ ಎಂದು ಆತನಿಗೆ ಅನಿಸುತ್ತಿತ್ತು. ಹೀಗೆಯೇ ಆತನು ತನ್ನ ಜೀವನವನ್ನು ಸವೆಸುತ್ತ ಹೋದನು.



ಮೆಲ್ಲಮೆಲ್ಲಗೆ ಸಮಯ ಕಳೆಯುತ್ತ ಹೋಯಿತು. ಎಳೆ ವಯಸ್ಸಿನ ಬಿರಜೂ ಈಗ ಯುವಕನಾಗಿಬಿಟ್ಟನು. ಕಾಲದ ಪೆಟ್ಟು ತಿನ್ನುತ್ತ ಕಷ್ಟಗಳನ್ನು ಎದುರಿಸುವುದು ಆತನಿಗೆ ಅಭ್ಯಾಸವಾಗಿಬಿಟ್ಟಿತ್ತು. ಆದರೂ ಆತನು ಹಾಗೂ ಹೀಗೂ ಮಾಡಿ ತನ್ನ ವಾಸಕ್ಕೆ ಒಂದು ಗುಡಿಸಲನ್ನು ಕಟ್ಟಿಕೊಂಡನು. ಜೊತೆಗೆ ಆತನು ಸ್ವಂತ ಚಹಾದ ತಳ್ಳುಗಾಡಿಯನ್ನು ಮಾಡಿಕೊಂಡನು. ಆತನ ಸಿಡುಕಿನ ಸ್ವಭಾವದ ಕಾರಣ ಆತನ ಅಂಗಡಿಗೆ ಬರುವವರೂ ಸಹ ಕಡಿಮೆ ಜನ. ಈ ಕಾರಣದಿಂದ ಆತನ ಸಂಪಾದನೆಯೂ ಸಹ ತುಂಬಾ ಕಡಿಮೆಯೇ ಆಗುತ್ತಿತ್ತು. ಇದಕ್ಕೂ ಸಹ ಬಿರಜೂ ತನ್ನ ದೌರ್ಭಾಗ್ಯವನ್ನೇ ದೂರುತ್ತಿದ್ದನು. ಬಿರಜೂನ ಮದುವೆ ರಮಾ ಎಂಬ ಯುವತಿಯೊಂದಿಗೆ ಆಯಿತು. ರಮಾ ತುಂಬಾ ಸಿಟ್ಟಿನ ಸ್ವಭಾವದ ಹೆಂಗಸಾಗಿದ್ದಳು. ಆಕೆಗೆ ಚಿಕ್ಕಪುಟ್ಟ ಮಾತಿಗೂ ಸಿಟ್ಟು ಬರುತ್ತಿತ್ತು. ಪ್ರತಿದಿನವೂ ಆಕೆ ಬಿರಜೂನನ್ನು ಆತನ ಬಡತನಕ್ಕಾಗಿ ಮೂದಲಿಸುತ್ತಿದ್ದಳು. ಬಿರಜೂ ತನ್ನ ಪತ್ನಿಯ ದುರ್ವರ್ತನೆಯಿಂದ ಸದಾ ಉದಾಸನಾಗಿರುತ್ತಿದ್ದನು. ಬಹುಶಃ ಅವರಿಬ್ಬರ ನಡುವೆ ಜಗಳವಿಲ್ಲದ ದಿನವೇ ಇರಲಿಲ್ಲ.

ಕ್ರಮೇಣ ಬಿರಜೂನಿಗೆ ಸರಾಯಿ ಕುಡಿಯುವ ಚಟ ಹತ್ತಿಕೊಂಡಿತು. ತಾನು ದುಡಿದುದನ್ನೆಲ್ಲ ಸರಾಯಿ ಕುಡಿದು ಕಳೆದುಬಿಡುತ್ತಿದ್ದನು. ಈ ಕಾರಣ ಆತನ ಹೆಂಡತಿಯೂ ಸಹ ಆತನ ಮೇಲೆ ಇನ್ನಷ್ಟು ಸಿಟ್ಟಾಗುತ್ತಿದ್ದಳು. ಸರಾಯಿಯು ಆತನ ಜೀವನವನ್ನು ಇನ್ನಷ್ಟು ಕೆಡಿಸಿಬಿಟ್ಟಿತ್ತು.

ದಿನಾಲೂ ಆತನು ತಡವಾಗಿ ಮನೆಗೆ ಬರುತ್ತಿದ್ದನು. ಮತ್ತೆ ಹೆಂಡತಿಯೊಂದಿಗೆ ಜಗಳವಾಡುತ್ತಿದ್ದನು. ಇಷ್ಟೇ ಅಲ್ಲದೆ ಆತನು ಅನೇಕ ಸಲ ಆತನು ತನ್ನ ಓಣಿಯವರೊಂದಿಗೂ ಜಗಳವಾಡುತ್ತಿದ್ದನು. ಈ ಕಾರಣಕ್ಕೆ ಆತನು ಅನೇಕ ಸಲ ಜೈಲಿಗೂ ಹೋಗಬೇಕಾಯಿತು. ಆದರೂ ಆತನು ಸರಾಯಿ ಕುಡಿಯುವುದನ್ನು ಬಿಡಲಿಲ್ಲ.

ಬಾಲ್ಯದಿಂದ ಇಲ್ಲಿಯವರೆಗೂ ಆತನ ಜೀವನವು ತುಂಬಾ ದುಃಖದಲ್ಲಿಯೇ ಕಳೆದಿತ್ತು. ಬಹುಶಃ ಆತನು ಜೀವನದಲ್ಲಿ ಒಂದು ದಿನವೂ ನಕ್ಕಿರಲಿಲ್ಲ. ಇಡೀ ಓಣಿಯವರು ಆತನನ್ನು ಈಗಲೂ ಅನಿಷ್ಟ ಎಂದೇ ಭಾವಿಸಿದ್ದರು. ಆತನೊಂದಿಗೆ ಮಾತನಾಡಲು ಯಾರೂ ಇಷ್ಟಪಡುತ್ತಿರಲಿಲ್ಲ.



ಒಂದು ದಿನ ಆತನ ತಳ್ಳುಗಾಡಿಯ ಬಳಿಗೆ ಕೆಲವು ದುಷ್ಟ ವ್ಯಕ್ತಿಗಳು ಚಹಾ ಕುಡಿಯಲು ಬಂದರು. ಅವರು ಬಿರಜೂನನ್ನು ಗದರಿಸಿ ಚಹಾ ಕೇಳಿದರು. ಬಿರಜೂ ಅವರಿಗೆ ಚಹಾ ಕೊಟ್ಟನು. ನಂತರ ಆತನು ಚಹಾದ ಹಣ ಕೇಳಲು ಅವರು ಸಿಟ್ಟಾಗಿ ಬಿರಜೂನನ್ನು ಬೆದರಿಸತೊಡಗಿದರು. ಬಿರಜೂ ಸಹ ಆವೇಶದಲ್ಲಿ ಬಂದು ತನ್ನ ಪ್ರಜ್ಞೆಯನ್ನು ಕಳೆದುಕೊಂಡನು. ಆತನು ಅವರೆಲ್ಲರೊಂದಿಗೆ ಬಾಯಿಗೆ ಬಂದಂತೆ ಮಾತನಾಡತೊಡಗಿದನು. ಇದರಿಂದ ಅವರು ಇನ್ನಷ್ಟು ಸಿಟ್ಟಾದರು. ಅವರಲ್ಲೊಬ್ಬನು ಬಿರಜೂನ ತಳ್ಳುಗಾಡಿಯನ್ನು ಉರುಳಿಸಿಬಿಟ್ಟನು. ಮತ್ತು ಸಾಮಾನನ್ನೆಲ್ಲ ರಸ್ತೆಗೆ ಎಸೆದನು. ಬಿರಜೂ ಆತನೊಂದಿಗೆ ಜಗಳಕ್ಕಿಳಿದಾಗ ಅವರೆಲ್ಲರೂ ಸೇರಿ ಆತನನ್ನು ಹೊಡೆಯಲು ತೊಡಗಿದರು. ಆತನು ಅರೆಜೀವವಾದಾಗ ಅವರು ಹೊಡೆಯುವುದನ್ನು ನಿಲ್ಲಿಸಿ, ಬೆದರಿಕೆ ಹಾಕಿ ಹೊರಟುಹೋದರು.

ಪೇಟೆಯ ಜನರೆಲ್ಲರೂ ಈ ತಮಾಷೆಯನ್ನು ನೋಡಿದರು. ಆದರೆ ಒಬ್ಬರೂ ಆತನ ಸಹಾಯಕ್ಕೆ ಬರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಬಿರಜೂಗೆ ಪ್ರಜ್ಞೆ ಬಂದಿತು. ಆತನು ತನ್ನ ಸಾಮಾನನ್ನೆಲ್ಲ ರಸ್ತೆಯ ಬದಿಯಲ್ಲಿಟ್ಟು ಮನೆಯ ಕಡೆಗೆ ಹೆಜ್ಜೆ ಹಾಕತೊಡಗಿದನು. ಸಾಯಂಕಾಲದ ಹೊತ್ತಿಗೆ ಆತನು ಮನೆಯನ್ನು ತಲುಪಿದನು. ನೋವಿನ ದನಿಯಲ್ಲಿಯೇ ಆತನು ತನ್ನ ಹೆಂಡತಿಯನ್ನು ಕರೆದನು. ಬಿರಜೂನ ಹೆಂಡತಿಯು ಆತನನ್ನು ಸಂತೈಸುವ ಬದಲಿಗೆ ಗದರಿಸಲು ತೊಡಗಿದಳು. ಓಣಿಯ ಜನರೆಲ್ಲ ಇದನ್ನು ಒಂದು ಮನರಂಜನೆಯಂತೆ ನೋಡುತ್ತಿದ್ದರು. ಇದರಿಂದ ಬಿರಜೂ ಇನ್ನಷ್ಟು ಹತಾಶನಾಗಿಬಿಟ್ಟನು. ತನ್ನ ಹೆಂಡತಿಯಿಂದಲಾದರೂ ತನಗೆ ಸಾಂತ್ವನ ಸಿಕ್ಕೀತೆಂದು ಭಾವಿಸಿದ್ದ ಆತನನ್ನು ಆಕೆಯೂ ಸಹ ತಿರಸ್ಕರಿಸಿಬಿಟ್ಟಳು.

ಈಗ ಬಿರಜೂಗೆ ಜೀವನವೆಲ್ಲ ದುಃಖಮಯವೆಂದು ಅನುಭವವಾಗತೊಡಗಿತು. ಆತನು ಸಿಟ್ಟಾಗಿ ಆಕಾಶದೆಡೆಗೆ ನೋಡುತ್ತ ತನಗಾದ ಅನ್ಯಾಯಕ್ಕೆ ಭಗವಂತನನ್ನು ದೂಷಿಸತೊಡಗಿದನು. ಆತನು ಭಗವಂತನನ್ನು ಮನಸ್ವೀ ಬಯ್ದನು. ಆತನು ಭಗವಂತನನ್ನು 'ಹೇ ಭಗವಂತ, ನಾನು ಜೀವನದಲ್ಲಿ ಯಾರಿಗೂ ಕೇಡು ಬಗೆದಿಲ್ಲ. ಆದರೆ ನನಗೆ ಯಾವಾಗಲೂ ಕೆಡುಕೇ ಆಗಿದೆ. ನೀನು ಯಾವಾಗಲೂ ನನಗೇ ಯಾಕೆ ಕೆಡುಕು ಮಾಡಿದ್ದೀಯ' ಎಂದು ನಿಂದಿಸಿದನು. ಸ್ವಲ್ಪ ಹೊತ್ತಿನ ನಂತರ ಆತನು ನಿರಾಸೆಯ ಮನಸ್ಸಿನಿಂದ ಗುಡಿಸಲಿನ ಒಂದು ಮೂಲೆಯಲ್ಲಿ ಹೋಗಿ ಅಳುತ್ತ ಅಳುತ್ತ ನಿದ್ರೆ ಹೋದನು.



ನಡುರಾತ್ರಿಯಲ್ಲಿ ನಾಲ್ಕೂ ಕಡೆ ನೀರವತೆ ಆವರಿಸಿತ್ತು. ಆಗ ಬಿರಜೂನಿಗೆ ಒಂದು ಅಲೌಕಿಕ ಧ್ವನಿಯು ಕೇಳಿ ಎಚ್ಚರವಾಯಿತು. ಎದುರಿಗೆ ನೋಡಿದರೆ ಆತನಿಗೆ ಎಲ್ಲೆಡೆ ಬೆಳಕೇ ಬೆಳಕು ಕಂಡುಬಂದಿತು. ವಾಸ್ತವವಾಗಿ ಆತನು ಬೇರೆ ಲೋಕಕ್ಕೆ ಬಂದಿದ್ದನು. ನಾಲ್ಕೂ ಕಡೆ ದಿವ್ಯ ಪ್ರಕಾಶ ಮತ್ತು ಅಲೌಕಿಕ ಶಾಂತಿಯಿತ್ತು. ತಾನು ಅಲ್ಲಿಗೆ ಹೇಗೆ ಬಂದೆನೆಂಬುದು ಬಿರಜೂನಿಗೆ ಸ್ವಲ್ಪವೂ ತಿಳಿಯಲಿಲ್ಲ. ಆತನು ಮನಸ್ಸಿನಲ್ಲಿಯೇ ತನ್ನೊಂದಿಗೆ ತಾನು 'ನಾನು ಎಲ್ಲಿಗೆ ಬಂದಿದ್ದೇನೆ? ನಾನು ಸತ್ತಿಲ್ಲ ತಾನೆ?' ಎಂದು ಮಾತನಾಡಿಕೊಳ್ಳತೊಡಗಿದನು. ಆತನು ತನ್ನ ಮೈಯನ್ನು ಮುಟ್ಟಿಕೊಂಡನು. ಎಲ್ಲವೂ ಸರಿಯಾಗಿತ್ತು.

ಆಗ ಬಿರಜೂನಿಗೆ ಪುನಃ ಅದೇ ಅಲೌಕಿಕ ಶಬ್ದ ಕೇಳಿಸಿತು. ಬಿರಜೂ ನಾಲ್ಕೂ ಕಡೆ ತಿರುಗಿ ನೋಡಿದರೆ ಆ ಲೋಕದಲ್ಲಿ ಆತನ ವಿನಃ ಮತ್ತಾರೂ ಕಂಡುಬರಲಿಲ್ಲ. ಆತನಿಗೆ ಒಳಗೇ ತುಂಬಾ ಭಯವಾಯಿತು. ಹೆದರುತ್ತಲೇ ಆತನು 'ಯಾರದು?' ಎಂದು ಕೂಗಿದನು.

ಆಗ ಆತನೆದುರು ಒಂದು ದಿವ್ಯಜ್ಯೋತಿಯು ಪ್ರತ್ಯಕ್ಷವಾಯಿತು. ಆ ದಿವ್ಯಜ್ಯೋತಿಯಿಂದ ನಾಲ್ಕೂ ಕಡೆ ಅಲೌಕಿಕ ಪ್ರಕಾಶವು ಹರಡುತ್ತಿತ್ತು. ಬಿರಜೂ ಸ್ವಲ್ಪ ಹೊತ್ತು ಆ ಅಲೌಕಿಕ ಅನುಭವದಲ್ಲಿ ಮೈಮರೆತನು. ಆ ದಿವ್ಯಜ್ಯೋತಿ ಮತ್ತಾರೂ ಆಗಿರದೆ ಪರಮಾತ್ಮನೇ ಆಗಿದ್ದರು. ಪರಮಾತ್ಮನು ಬಿರಜೂನೊಂದಿಗೆ ಮಾತನಾಡತೊಡಗಿದರು.

ಪರಮಾತ್ಮ: ನನ್ನ ಮಧುರ ಮಗೂ, ನಾನು ನಿನ್ನ ತಂದೆಯಾಗಿದ್ದೇನೆ.

ಬಿರಜೂ: ನೀವು ನನ್ನ ತಂದೆಯಾಗುವುದು ಹೇಗೆ ಸಾಧ್ಯ? ನನ್ನ ತಂದೆಯಂತೂ ಸತ್ತು ಅನೇಕ ವರ್ಷಗಳಾಗಿವೆ. ನನ್ನನ್ನು ಮೂರ್ಖನನ್ನಾಗಿ ಮಾಡಬೇಡಿರಿ. ನಿಜವಾಗಿ ಹೇಳಿರಿ, ನೀವು ಯಾರು?

ಪರಮಾತ್ಮ: ನಾನಂತೂ ನಿನ್ನ ತಂದೆಯೇ ಆಗಿದ್ದೇನೆ, ನನ್ನ ಮಗೂ, ಸತ್ತುಹೋಗಿರುವವರು ನಿನ್ನ ಶರೀರದ ತಂದೆಯಾಗಿದ್ದರು. ನಾನಂತೂ ನಿನ್ನ ಆತ್ಮದ ತಂದೆಯಾಗಿದ್ದೇನೆ. ಎಲ್ಲರೂ ನನ್ನನ್ನು ಪರಮಾತ್ಮ ಎಂದು ಕರೆಯುತ್ತಾರೆ.



ಬಿರಜೂ: (ಸಿಟ್ಟಿನಿಂದ) ಒಳ್ಳೆಯದು, ಹಾಗಾದರೆ ಭಗವಂತನೆಂದರೆ ನೀವೇನಾ. ನನಗೆ ನಿಮ್ಮ ಮೇಲೆ ತುಂಬಾ ಬೇಜಾರಾಗಿಬಿಟ್ಟಿದೆ. ನೀವು ನನಗೆ ಜೀವನದಲ್ಲಿ ಬರೀ ದುಃಖವನ್ನೇ ಕೊಟ್ಟಿದ್ದೀರಿ. ಬಾಲ್ಯದಿಂದ ಇಲ್ಲಿಯತನಕ ನನಗೆ ಕೆಡುಕನ್ನೇ ಮಾಡಿದ್ದೀರಿ. ಸರಿ, ನಾನು ಯಾರಿಗೆ ಕೇಡು ಬಗೆದ ಕಾರಣಕ್ಕೆ ನೀವು ಇಷ್ಟೊಂದು ದುಃಖ ನೀಡುತ್ತಿದ್ದೀರಿ? ಈಗ ನನ್ನ ಮೇಲೆ ಸ್ವಲ್ಪ ದಯೆ ತೋರಿ.

ಪರಮಾತ್ಮ: (ಮುಗುಳ್ನಗುತ್ತ) ನಾನಂತೂ ನಿನ್ನ ತಂದೆಯಾಗಿದ್ದೇನೆ. ಎಂದಾಗ ನಾನು ನಿನಗೆ ಏಕೆ ದುಃಖ ನೀಡಲಿ? ನಾನಂತೂ ಸುಖದ ಸಾಗರನಾಗಿದ್ದೇನೆ. ದುಃಖಹರ್ತಾ ಸುಖಕರ್ತಾ ಆಗಿದ್ದೇನೆ. ನಾನು ಎಲ್ಲರ ದುಃಖವನ್ನು ಹರಣ ಮಾಡಿ ಇಡೀ ವಿಶ್ವಕ್ಕೆ ಸುಖವನ್ನೇ ನೀಡುತ್ತೇನೆ. ನನ್ನ ಮಗೂ, ನಾನು ಯಾರಿಗೂ ಎಂದೂ ದುಃಖ ನೀಡುವುದಿಲ್ಲ.

ಬಿರಜೂ: (ನಿರಾಸೆಯಿಂದ) ನೀವೇ ಇಡೀ ವಿಶ್ವವನ್ನು ನಡೆಸುವವನಾಗಿದ್ದೀರಿ, ನೀವೇ ಎಲ್ಲರಿಗೂ ಸುಖ ದುಃಖ ನೀಡುತ್ತೀರಿ, ಒಂದು ವೇಳೆ ನೀವು ದುಃಖ ನೀಡುತ್ತಿಲ್ಲ ಎಂದರೆ ಯಾವ ಕಾರಣಕ್ಕಾಗಿ ನಾನು ಇಷ್ಟೆಲ್ಲ ದುಃಖಗಳನ್ನು ಅನುಭವಿಸುತ್ತಿರುವುದೇಕೆ?

ಪರಮಾತ್ಮ: (ಪ್ರೀತಿಯಿಂದ) ನನ್ನ ಮಗುವೇ, ಸುಖ ದುಃಖ, ಇದೆಲ್ಲ ಕರ್ಮಗಳ ಫಲವಾಗಿದೆ. ಇದರಲ್ಲಿ ನಾನು ಏನೂ ಮಾಡುವುದಿಲ್ಲ. ಯಾರು ಎಂತಹ ಕರ್ಮವನ್ನು ಮಾಡುತ್ತಾರೆಯೋ ಅವರಿಗೆ ಅಂತಹುದೇ ಫಲವು ಸಿಗುತ್ತದೆ.

ಬಿರಜೂ: ಆದರೆ ನಾನಂತೂ ಇಡೀ ಜೀವನದಲ್ಲಿ ಯಾರಿಗೂ ಇಷ್ಟೊಂದು ದುಃಖ ನೀಡಿಲ್ಲ, ಮತ್ತು ಯಾವುದೇ ಪಾಪಕರ್ಮವನ್ನು ಮಾಡಿಲ್ಲ. ಆದರೂ ನನಗೆ ದುಃಖವು ಏಕೆ ಸಿಗುತ್ತಿದೆ. ಬಾಲ್ಯದಿಂದ ಹಿಡಿದು ಇಲ್ಲಿಯ ತನಕ ದುಃಖದ ವಿನಃ ಮತ್ತೇನೂ ಸಿಗಲಿಲ್ಲ.

ಪರಮಾತ್ಮ: ಮಗೂ, ನೀನು ಕೇವಲ ನಿನ್ನ ಈ ವರ್ತಮಾನ ಜನ್ಮವನ್ನು ಮಾತ್ರ ನೋಡುತ್ತಿದ್ದೀಯ. ಆದರೆ ಇದು ನಿನ್ನ ಪೂರ್ವ ಜನ್ಮದ ಕರ್ಮಗಳ ಫಲವಾಗಿದೆ.

ಬಿರಜೂ: ಪೂರ್ವ ಜನ್ಮವೇ? ಹಾಗೆಂದರೇನು? ನನ್ನ ಈಗಿನ ಜನ್ಮಕ್ಕಿಂತ ಮುಂಚೆಯೂ ಸಹ ಯಾವುದಾದರೂ ಜನ್ಮವು ಇತ್ತೇ?



ಪರಮಾತ್ಮ: ಪೂರ್ವ ಜನ್ಮಗಳ ರಹಸ್ಯವನ್ನು ತಿಳಿದುಕೊಳ್ಳುವ ಮುಂಚೆ ವಾಸ್ತವವಾಗಿ ನೀನು ಯಾರು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ.

ಬಿರಜೂ: ನಾನು ಯಾರೆಂದು ನನಗೆ ಗೊತ್ತು. ನಾನು ಬಿರಜೂ, ಮುಂಬೈ ನಗರದಲ್ಲಿ ಚಹಾ ಮಾರುವವನು ಮತ್ತು ಈ ಪ್ರಪಂಚದಲ್ಲಿ ಅತ್ಯಂತ ದುರದೃಷ್ಟವಂತ ಮನುಷ್ಯನಾಗಿದ್ದೇನೆ.

ಪರಮಾತ್ಮ: ನೀನು ಮಾಡುತ್ತಿರುವ ಎಲ್ಲಕ್ಕಿಂತ ದೊಡ್ಡ ತಪ್ಪು ಏನೆಂದರೆ ನಿನ್ನನ್ನು ಶರೀರವೆಂದು ತಿಳಿದಿರುವುದು. ವಾಸ್ತವದಲ್ಲಿ ಈ ಪ್ರಪಂಚದಲ್ಲಿ ಯಾರೆಲ್ಲ ಮನುಷ್ಯರಿದ್ದಾರೆ ಅವರಾರೂ ಶರೀರವಲ್ಲ. ಆದರೆ ಶರೀರದಲ್ಲಿ ವಿರಾಜಮಾನರಾಗಿರುವ ಆತ್ಮರಾಗಿದ್ದಾರೆ.

ಬಿರಜೂ: ಆತ್ಮ?

ಪರಮಾತ್ಮ: ಹೌದು, ಆತ್ಮ. ನೀನೂ ಸಹ ಆತ್ಮನೇ.

ಬಿರಜೂ: ಆತ್ಮ ಎಂದರೇನು?

ಪರಮಾತ್ಮ: ಆತ್ಮ ಒಂದು ಚೈತನ್ಯ, ದಿವ್ಯ ಶಕ್ತಿಯಾಗಿದೆ. ಅದು ಇಡೀ ಶರೀರವನ್ನು ನಡೆಸುತ್ತದೆ. ಆತ್ಮವೇ ಶರೀರದ ಮೂಲಕ ಒಳ್ಳೆಯ ಮತ್ತು ಕೆಟ್ಟ ಕರ್ಮಗಳನ್ನು ಮಾಡುತ್ತದೆ. ಆಕಾರದಲ್ಲಿ ಆತ್ಮವು ಒಂದು ಸೂಕ್ಷ್ಮ ಬಿಂದುವಾಗಿದೆ. ಆತ್ಮವು ಅವಿನಾಶಿಯಾಗಿದೆ. ಅದು ಎಂದೂ ಸಾಯುವುದಿಲ್ಲ, ಸಾಯುವುದು ಶರೀರ. ಶರೀರವು ಹಳೆಯದಾದಾಗ ಅಥವಾ ಪೆಟ್ಟು ತಿಂದು ಕೆಟ್ಟುಹೋದಾಗ ಆತ್ಮವು ಆ ಶರೀರವನ್ನು ಬಿಟ್ಟು ಇನ್ನೊಂದು ಶರೀರವನ್ನು ಧಾರಣೆ ಮಾಡುತ್ತದೆ. ಆತ್ಮವು ಹಳೆಯ ಶರೀರವನ್ನು ಬಿಡುವ ಕ್ರಿಯೆಗೆ ಸಾವು ಎಂತಲೂ, ಮತ್ತು ಹೊಸ ಮಗುವಿನ ಶರೀರವನ್ನು ಧಾರಣೆ ಮಾಡುವುದಕ್ಕೆ ಹುಟ್ಟು ಎಂತಲೂ ಹೇಳಲಾಗುತ್ತದೆ. ಆತ್ಮವು ಒಂದರ ನಂತರ ಮತ್ತೊಂದು, ಈ ರೀತಿ ಅನೇಕ ಜನ್ಮಗಳನ್ನು ತೆಗೆದುಕೊಳ್ಳುತ್ತದೆ. ಇದಕ್ಕೇ ಪುನರ್ಜನ್ಮ ಎನ್ನಲಾಗುತ್ತದೆ. ಈ ಜನ್ಮಕ್ಕಿಂತ ಮುಂಚೆ ನಿನ್ನವು ಅನೇಕ ಜನ್ಮಗಳು ಕಳೆದಿವೆ.



ಬಿರಜೂ: ಒಳ್ಳೆಯದು, ಹಾಗಾದರೆ ನಾನು ಪೂರ್ವಜನ್ಮದಲ್ಲಿ ಯಾರಾಗಿದ್ದೆನು, ಮತ್ತು ನನ್ನ ಎಂತಹ ಕರ್ಮಗಳ ಕಾರಣ ಇಂದು ನನಗೆ ಇಷ್ಟೊಂದು ದುಃಖ ಭೋಗಿಸಬೇಕಾಗಿ ಬಂದಿತು ಎಂಬುದನ್ನು ತಿಳಿಸಬಲ್ಲಿರಾ?

ಪರಮಾತ್ಮ: ಹೌದು, ಏಕಿಲ್ಲ. ಆ ಪೂರ್ವಜನ್ಮಗಳ ಸಾಕ್ಷಾತ್ಕಾರವನ್ನು ಮಾಡಿಸಲೆಂದೇ ನಾನು ನಿನ್ನ ಸಮಕ್ಷಮ ಬಂದಿದ್ದೇನೆ.

ಪರಮಾತ್ಮ ಬಿರಜೂಗೆ ಆತನ ಹಿಂದಿನ ಜನ್ಮಗಳ ಸಾಕ್ಷಾತ್ಕಾರ ಮಾಡಿಸಿದರು. ಅವರು ಆತನನ್ನು ಹಿಂದಿನ ಕಾಲದ ಒಂದು ನಗರಕ್ಕೆ ಕರೆದೊಯ್ದರು. ಬಿರಜೂನ ಎದುರಿನಲ್ಲಿ ಒಂದು ದೊಡ್ಡ ಅರಮನೆಯಿತ್ತು. ಆತನು ತನ್ನ ಜೀವಿತಕಾಲದಲ್ಲಿ ಎಂದೂ ಇಷ್ಟೊಂದು ಭವ್ಯವಾದ ಅರಮನೆಯನ್ನು ನೋಡಿರಲಿಲ್ಲ. ಸ್ವಲ್ಪ ಸಮಯದವರೆಗೆ ಆತನು ಅತ್ತಿತ್ತ ನೋಡುತ್ತಿದ್ದು ನಂತರ ಕುತೂಹಲದಿಂದ ಪರಮಾತ್ಮನೊಂದಿಗೆ ಕೇಳಿದನು.


ಬಿರಜೂ: ಪ್ರಭೂ, ತಾವು ನನ್ನನ್ನು ಎಲ್ಲಿಗೆ ಕರತಂದಿದ್ದೀರಿ?

ಪರಮಾತ್ಮ: ನಾನು ನಿನ್ನ ಪೂರ್ವಜನ್ಮದ ಸಾಕ್ಷಾತ್ಕಾರ ಮಾಡಿಸುತ್ತಿದ್ದೇನೆ. ನೀನು ನಿನ್ನ ಹಿಂದಿನ ಜನ್ಮದಲ್ಲಿ ಇದ್ದ ನಗರಕ್ಕೆ ಈಗ ನಾವು ಬಂದಿದ್ದೇವೆ.

ಪರಮಾತ್ಮ ಬಿರಜೂನನ್ನು ಆ ಅರಮನೆಯ ಒಳಗೆ ಕರೆದೊಯ್ಯುತ್ತಾರೆ. ಅರಮನೆಯಲ್ಲಿ ನಾಲ್ಕೂ ಕಡೆ ಬಹಳ ಜನ ಪಹರೆಯವರಿದ್ದರು. ಬಿರಜೂಗೆ ಎದುರಿನಲ್ಲಿ ಕಾಣುತ್ತಿದ್ದ ವ್ಯಕ್ತಿ ಬಹುಶಃ ತಾನೇ ಅನಿಸಿತು. ಆತನು ತನ್ನ ಪೂರ್ವಜನ್ಮದ ವ್ಯಕ್ತಿಯನ್ನು ನೋಡಲು ತುಂಬಾ ಉತ್ಸುಕನಾಗಿದ್ದನು. ಅದೇ ಸಮಯದಲ್ಲಿ ಅರಮನೆಯ ಒಳಗಿನಿಂದ ಕೆಲವರ ನೋವಿನ ಚೀತ್ಕಾರಗಳು ಕೇಳಿಬರತೊಡಗಿದವು. ಆ ಚೀತ್ಕಾರಗಳನ್ನು ಕೇಳಿ ಬಿರಜೂ ತುಂಬಾ ಹೆದರಿಹೋದನು. ಮತ್ತು ಪರಮಾತ್ಮನೊಂದಿಗೆ ಕೇಳಿದನು;

ಬಿರಜೂ: ಈ ಚೀರಾಟ ಎಲ್ಲಿಂದ ಬರುತ್ತಿದೆ?

ಪರಮಾತ್ಮ: ಈ ನೋವಿನ ಧ್ವನಿಗಳು ಅರಮನೆಯ ಬಂದೀಖಾನೆಯಿಂದ ಬರುತ್ತಿವೆ.



ಪರಮಾತ್ಮನು ಬಿರಜೂನನ್ನು ಬಂದೀಖಾನೆಯತ್ತ ಕರೆದೊಯ್ದರು. ಬಂದೀಖಾನೆಯಲ್ಲಿ ಕೈದಿಗಳಿಗೆ ಚೆನ್ನಾಗಿ ಹೊಡೆಯಲಾಗುತ್ತಿತ್ತು. ಇಡೀ ವಾತಾವರಣದಲ್ಲೆಲ್ಲ ಆ ಚೀರಾಟಗಳು ಪ್ರತಿಧ್ವನಿಸುತ್ತಿದ್ದವು. ಎಲ್ಲ ಕೈದಿಗಳು ಸೈನಿಕರೊಂದಿಗೆ ಅಂಗಾಲಾಚಿ ಕ್ಷಮೆ ಬೇಡುತ್ತಿದ್ದರು.

ಬಿರಜೂ: ಇವರಿಗೆ ಯಾವ ಅಪರಾಧದ ಕಾರಣ ಹೊಡೆಯಲಾಗುತ್ತಿದೆ?

ಪರಮಾತ್ಮ: ಇವರು ತಮ್ಮ ಕ್ರೂರಿ ರಾಜ ರಾಜವೀರಸಿಂಹನ ವಿರುದ್ಧ ಪ್ರತಿಭಟನಾ ಪ್ರದರ್ಶನ ಮಾಡಿದ್ದರು. ಇದಕ್ಕಾಗಿ ರಾಜನು ಇವರನ್ನು ಬಂಧಿಸಿ ರಾಜದ್ರೋಹವೆಸಗಿದ್ದಕ್ಕೆ ಶಿಕ್ಷೆಗೆ ಗುರಿಪಡಿಸಿದನು.

ಬಿರಜೂ: ಇದಂತೂ ಈ ನಿರಪರಾಧಿಗಳಿಗೆ ಪೂರ್ತಿ ಅನ್ಯಾಯ ಮಾಡಿದಂತೆ. ನೀವು ಈ ಅನ್ಯಾಯವನ್ನು ತಡೆಯುತ್ತಿಲ್ಲವೇಕೆ?

ಪರಮಾತ್ಮ: ಇದು ನನ್ನ ಕೆಲಸವಲ್ಲ. ಇದೆಲ್ಲ ಕರ್ಮಗಳ ಗುಹ್ಯಗತಿಯಾಗಿದೆ. ಯಾರು ಎಂತಹ ಕರ್ಮ ಮಾಡುವರೋ ಅಂತಹ ಫಲ ಅವರಿಗೆ ಸಿಗುತ್ತದೆ. ಮತ್ತು ಯಾರು ಈ ಅನ್ಯಾಯ ಮಾಡುತ್ತಿರುವರೋ ಅವರಿಗೂ ಅದರ ಫಲವು ಅವಶ್ಯವಾಗಿ ಸಿಗುತ್ತದೆ.

ಬಿರಜೂ: ಇದರ ಅರ್ಥ – ಈ ಎಲ್ಲ ಕೈದಿಗಳೂ ಸಹ ಇಂತಹ ಯಾವುದೋ ಕರ್ಮಗಳನ್ನು ಮಾಡಿರುತ್ತಾರೆ, ಅದರ ಫಲ ಇಂದು ಅವರಿಗೆ ಸಿಗುತ್ತಿದೆ.

ಪರಮಾತ್ಮ: ಸರಿಯಾಗಿ ತಿಳಿದುಕೊಂಡೆ. ಮನುಷ್ಯನಿಗೆ ತನ್ನ ಕರ್ಮಗಳ ಫಲವು ಈ ಭೂಮಿಯ ಮೇಲೆಯೇ ಸಿಗುತ್ತದೆ. ಅದು ಈ ಜನ್ಮದಲ್ಲಾದರೂ ಆಗಬಹುದು, ಇಲ್ಲವೇ ನಂತರದ ಜನ್ಮದಲ್ಲಾದರೂ ಆಗಬಹುದು.

ಬಿರಜೂ: ಪ್ರಭೂ, ತಾವು ನನ್ನನ್ನು ನನ್ನ ಪೂರ್ವ ಜನ್ಮದ ಸಾಕ್ಷಾತ್ಕಾರ ಮಾಡಿಸಲು ಕರೆತಂದಿದ್ದಿರಿ. ಎಂದಾಗ ಕೊನೆಗೂ ಇವರೆಲ್ಲರಲ್ಲಿ ನಾನು ಯಾರು?

ಪರಮಾತ್ಮ: (ನಗುತ್ತ) ನೀನು ನಿನ್ನ ಪೂರ್ವ ಜನ್ಮವನ್ನು ನೋಡಲು ತುಂಬಾ ಉತ್ಸುಕನಾಗಿದ್ದೀಯ. ಆದರೆ ಅದಕ್ಕಿಂತ ಮುಂಚೆ ಈ ನಿರಪರಾಧಿಗಳಿಗೆ ಅನ್ಯಾಯ ಮಾಡುತ್ತಿರುವ ರಾಜನನ್ನು ನೋಡಲು ಇಷ್ಟವಿಲ್ಲವೇ?

ಬಿರಜೂ: ಸರಿ, ತಮ್ಮಿಷ್ಟದಂತೆಯೇ ಆಗಲಿ.

ಪರಮಾತ್ಮನು ಬಿರಜೂನನ್ನು ಇನ್ನೊಂದು ಕೋಣೆಗೆ ಕರೆದೊಯ್ಯುವರು. ಅಲ್ಲಿ ರಾಜನಾದ ರಾಜವೀರಸಿಂಹನು ಸರಾಯಿಯ ಮತ್ತಿನಲ್ಲಿ ತನ್ನ ಕೆಲವು ಮಂತ್ರಿಗಳೊಂದಿಗೆ ಕುಳಿತಿದ್ದನು. ಅಲ್ಲಿ ಒಂದು ಮಹತ್ವದ ವಿಷಯದ ಬಗ್ಗೆ ಮಾತಾಡುತ್ತಿದ್ದನು.



ಬಿರಜೂ: ತಾವು ನನ್ನನ್ನು ಎಲ್ಲಿಗೆ ಕರೆತಂದಿರಿ? ಇವರೆಲ್ಲ ಯಾರು?

ಪರಮಾತ್ಮ: ಇದು ಆ ರಾಜನ ಕೋಣೆ. ಅಲ್ಲಿ ಕುಳಿತಿರುವವನು ರಾಜ. ಮತ್ತು ಜೊತೆಗೆ ಕುಳಿತವರು ಆತನ ಮಂತ್ರಿಗಳು.

ಆಗ ರಾಜನ ಸೇವಕನೊಬ್ಬನು ರಾಜನಿಗಾಗಿ ಸರಾಯಿ ತಂದನು. ರಾಜನು ಮತ್ತಿನಲ್ಲಿದ್ದನು. ಕಾರಣವಿಲ್ಲದೆ ಆತನು ಆ ಸೇವಕನನ್ನು ಬೆದರಿಸಲು ಪ್ರಾರಂಭಿಸಿದನು. ಆ ಸೇವಕನು ಸುಮ್ಮನೆ ಆತನ ಬೆದರಿಕೆಯ ಮಾತುಗಳನ್ನು ಕೇಳುತ್ತ ಇದ್ದನು. ನಂತರ ಆತನು ಅಲ್ಲಿಂದ ಹೊರಟುಹೋದನು.

ಬಿರಜೂ: ಅರೆ. ಈತನು ಎಷ್ಟು ಕ್ರೂರ ರಾಜನಾಗಿದ್ದಾನೆ. ಕಾರಣವಿಲ್ಲದೆ ಆತನು ಆ ಸೇವಕನನ್ನು ಬೆದರಿಸಿದನು.

ಪರಮಾತ್ಮ: ಸರಾಯಿಯ ಮತ್ತಿನಲ್ಲಿ ಈ ರಾಜನು ತನ್ನ ವಿವೇಕವನ್ನು ಕಳೆದುಕೊಂಡಿದ್ದಾನೆ. ಸರಾಯಿಯು ಎಂತಹುದೆಂದರೆ ಅದು ಏನೂ ಗೊತ್ತಿಲ್ಲದವರಿಂದಲೂ ಪಾಪಕರ್ಮವನ್ನು ಮಾಡಿಸುತ್ತದೆ. ನೀನೂ ಸಹ ಸರಾಯಿಯ ಮತ್ತಿನಲ್ಲಿ ಕೆಲವು ತಪ್ಪುಗಳನ್ನು ಮಾಡಿಬಿಡುತ್ತೀಯ. ಆದ್ದರಿಂದ ನಾನು ನಿನಗೆ ಸರಾಯಿಯಿಂದ ದೂರವಿರು ಎಂದು ವಿನಂತಿಸುತ್ತೇನೆ. ಸರಾಯಿಯಿಂದ ಲಾಭವಂತೂ ಇಲ್ಲ, ಆದರೆ ನಷ್ಟ ಬಹಳ ಇದೆ.

ಬಿರಜೂ: ಸರಿ, ತಾವು ಹೇಳಿದ ಮಾತನ್ನು ನಾನು ಜೀವಮಾನ ಪೂರ್ತಿ ಗಮನದಲ್ಲಿಟ್ಟುಕೊಳ್ಳುತ್ತೇನೆ. ಆದರೆ ತಾವು ನನಗೆ ಈ ದೃಶ್ಯವನ್ನ ಏಕೆ ತೋರಿಸಿದಿರಿ ಎಂಬುದನ್ನಾದರೂ ತಿಳಿಸಿರಿ.

ಪರಮಾತ್ಮ: ಆ ಸೇವಕ ಇನ್ನೂ ಈಗ ತಾನೆ ಹೋದನಲ್ಲ, ಆತನನ್ನು ನೀನು ಗುರುತಿಸಿದೆಯಾ?

ಬಿರಜೂ: ಇಲ್ಲ, ಆತನನ್ನು ಮುಂಚೆ ಎಂದೂ ನೋಡಿಲ್ಲ.

ಪರಮಾತ್ಮ: ಆತನು ನೀನು ಒಂದು ಕಾಲದಲ್ಲಿ ಕೆಲಸ ಮಾಡುತ್ತಿದ್ದ ಚಹಾದ ಅಂಗಡಿಯ ಮಾಲೀಕ.

ಬಿರಜೂ: ಓಹೋ, ಈತನು ಆ ಚಹಾದ ಅಂಗಡಿಯ ಮಾಲೀಕನೋ? ಆತನಂತೂ ನನಗೆ ಬಾರಿಬಾರಿಗೂ ಬೆದರಿಸುತ್ತಿದ್ದನು ಮತ್ತು ನಿಷ್ಕಾರಣವಾಗಿ ನನ್ನನ್ನು ಹೊಡೆಯುತ್ತಿದ್ದನು. ಈ ಪಾಪಿಗೆ ಹೀಗೇ ಆಗಬೇಕು.

ಪರಮಾತ್ಮ: (ತಿಳುವಳಿಕೆ ನೀಡುವ ರೀತಿಯಲ್ಲಿ) ಇಷ್ಟೊಂದು ಉತ್ಸುಕನಾಗಬೇಡ. ಯಾರಿಗೆ ಏನಾಗಬೇಕು, ಏನಾಗಬಾರದು ಎಂಬುದರ ತೀರ್ಮಾನವನ್ನು ನೀನು ವಿಧಿಯ ವಿಧಾನಕ್ಕೆ ಬಿಟ್ಟುಬಿಡು. ಯಾರು ಎಂತಹ ಕರ್ಮ ಮಾಡುವರು ಅವರಿಗೆ ಅಂತಹ ಫಲವು ಅವಶ್ಯವಾಗಿ ಸಿಗುವುದು. ಆದರೆ ನೀನು ಅದನ್ನು ಕಂಡು ನಿನ್ನ ಮನಃಸ್ಥಿತಿಯನ್ನು ಏಕೆ ಕೆಡಿಸಿಕೊಳ್ಳುತ್ತೀಯ?

ಬಿರಜೂ: ಸರಿ.



ಮತ್ತೆ ಪರಮಾತ್ಮ ಮತ್ತು ಬಿರಜೂ ರಾಜವೀರಸಿಂಹ ಮತ್ತು ಆತನ ಮಂತ್ರಿಗಳ ನಡುವೆ ನಡೆಯುತ್ತಿದ್ದ ಸಂಭಾಷಣೆಯನ್ನು ಆಲಿಸತೊಡಗಿದರು. ಅವರೆಲ್ಲರೂ ನಗರದಲ್ಲಿ ನಡೆದ ಜನಾಂದೋಲನದ ವಿಷಯದ ಬಗ್ಗೆ ಮಾತಾಡುತ್ತಿದ್ದರು.

ಮಂತ್ರಿ: ಮಹಾರಾಜ, ರಾಜ್ಯದ ಎಲ್ಲ ಜನರನ್ನು ತಮ್ಮ ವಿರುದ್ಧ ಎತ್ತಿಕಟ್ಟುವ ಕಾರ್ಯದಲ್ಲಿ ತೊಡಗಿದ್ದ ಯುವಕರನ್ನು ನಾವು ಬಂಧಿಸಿದ್ದೇವೆ. ಈಗ ಅವರನ್ನು ಏನು ಮಾಡಬೇಕೆಂಬುದನ್ನು ತಾವು ತಿಳಿಸಬೇಕು.

ರಾಜ: ಈ ನೀಚ ಜನರನ್ನು ಬಂಧಿಸಿ ಒಳ್ಳೆಯ ಕೆಲಸ ಮಾಡಿದೆ. ನಮ್ಮನ್ನು ವಿರೋಧಿಸಿದ ಇವರೆಲ್ಲರಿಗೂ ಎಂತಹ ಕಠಿಣ ಶಿಕ್ಷೆಯಾಗಬೇಕೆಂದರೆ ಮತ್ತೆ ಯಾರೂ ಎಂದೂ ನಮ್ಮನ್ನು ವಿರೋಧಿಸುವ ಸಾಹಸ ಮಾಡಬಾರದು.

ಮಂತ್ರಿ: ಮಹಾರಾಜರು ಸರಿಯಾಗಿ ಹೇಳಿದಿರಿ, ನಾವು ಇವರಿಗೆ ಮರಣದಂಡನೆ ವಿಧಿಸಬೇಕು.

ರಾಜ: ಸರಿ, ಇವರನ್ನೆಲ್ಲ ನಾಳೆ ಎಲ್ಲ ನಗರವಾಸಿಗಳ ಸಮಕ್ಷಮದಲ್ಲಿ ನೇಣು ಹಾಕಿರಿ. ಜೊತೆಗೆ ನಗರವಾಸಿಗಳಿಗೆ ನಮ್ಮನ್ನು ವಿರೋಧಿಸುವ ಧೈರ್ಯ ಮಾಡಿದವರೆಲ್ಲರಿಗೂ ಇದೇ ಗತಿಯಾಗುತ್ತದೆ ಎಂಬ ಎಚ್ಚರಿಕೆ ನೀಡಿರಿ.

ಬಿರಜೂ: ಅರೆ! ಈ ರಾಜನು ಎಷ್ಟೊಂದು ಕ್ರೂರಿ, ಮುಂಗೋಪಿಯಾಗಿದ್ದಾನೆ? ಸ್ವಲ್ಪವೂ ಯೋಚಿಸದೆ, ಆ ಜನರಿಗೆ ಮರಣದಂಡನೆ ವಿಧಿಸಿದನಲ್ಲ. ಈ ರೀತಿ ಎಷ್ಟು ಜನರಿಗೆ ಮರಣದಂಡನೆ ವಿಧಿಸಿದ್ದಾನೋ ಗೊತ್ತಿಲ್ಲ.

ಪರಮಾತ್ಮ: ಯಾವ ಜನರಿಗೆ ಆತನು ಈಗ ಮರಣದಂಡನೆ ವಿಧಿಸಿದ್ದಾನೋ ಅವರು ಯಾರೆಂದು ನಿನಗೆ ಗೊತ್ತೇ?

ಬಿರಜೂ: ಇಲ್ಲ, ಅವರು ನನಗೆ ಗೊತ್ತಿಲ್ಲ.

ಪರಮಾತ್ಮ: ನಿನ್ನೆ ನಿನ್ನನ್ನು ಚೆನ್ನಾಗಿ ಹೊಡೆದು, ನಿನ್ನ ಗಾಡಿಯನ್ನು ಉರುಳಿಸಿ ಹೋದರಲ್ಲವೇ? ಅವರೇ ಈ ಜನ.

ಬಿರಜೂ: ಹೌದೇ? ಇವರು ಅದೇ ಜನವೇ? ಇವರಿಗಂತೂ ಇನ್ನಷ್ಟು ದೊಡ್ಡ ಶಿಕ್ಷೆಯಾಗಬೇಕು.

ಪರಮಾತ್ಮ: ಶಾಂತನಾಗು ಬಿರಜೂ. ನಾನು ಈಗ ತಾನೇ ಹೇಳಿದಂತೆ ಯಾರು ಎಂತಹ ಕರ್ಮ ಮಾಡುವರೋ ಅವರಿಗೆ ಅದರ ಫಲವು ಸ್ವತಃ ಸಿಕ್ಕಿಬಿಡುತ್ತದೆ. ಅದರ ಚಿಂತನೆ ಮಾಡುವುದು ನಿನ್ನ ಕೆಲಸವಲ್ಲ.

ಬಿರಜೂ: ಆದರೆ ಅವರು ನನಗೆ ಬಹಳ ಕೇಡು ಮಾಡಿದ್ದಾರೆ, ಎಂದಾಗ ಅವರ ಅನ್ಯಾಯವನ್ನು ನಾನು ಹೇಗೆ ಮರೆಯಲಿ?



ಪರಮಾತ್ಮ: ಈ ಎಲ್ಲ ರಹಸ್ಯವು ನಿನಗೆ ಸ್ವಲ್ಪ ಹೊತ್ತಿನಲ್ಲೇ ಗೊತ್ತಾಗಿಬಿಡುತ್ತದೆ. ಆದ್ದರಿಂದ ನೀನು ಈಗ ಶಾಂತನಾಗಿರು.

ಇದರ ನಂತರ ಪರಮಾತ್ಮನು ಬಿರಜೂನನ್ನು ಅರಮನೆಯ ಬಂದೀಖಾನೆಯ ಒಂದು ಕೋಣೆಗೆ ಕರೆದೊಯ್ದರು. ಅಲ್ಲಿ ಒಬ್ಬ ಕೈದಿಯನ್ನು ಬಂಧಿಸಿ ಇಡಲಾಗಿತ್ತು. ಆತನ ಸ್ಥಿತಿ ಶೋಚನೀಯವಾಗಿತ್ತು. ಆತನು ತುಂಬಾ ಕೃಶನೂ, ದುರ್ಬಲನೂ ಆಗಿಬಿಟ್ಟಿದ್ದನು. ಆತನ್ನು ಬೇಡಿಗಳಿಂದ ಕಟ್ಟಿಹಾಕಲಾಗಿತ್ತು. ಆತನ ಮುಖವನ್ನು ನೋಡಿದರೆ ಆತನು ತನ್ನ ಜೀವನದಲ್ಲಿತುಂಬಾ ಜುಗುಪ್ಸೆ ಹೊಂದಿದ್ದನು ಎಂಬುದು ಕಂಡುಬರುತ್ತಿತ್ತು.

ಬಿರಜೂ: ಪ್ರಭೂ, ಈತನು ಯಾರು? ಈತನ ಸ್ಥಿತಿಯಂತೂ ತುಂಬಾ ಶೋಚನೀಯವಾಗಿದೆ.

ಪರಮಾತ್ಮ: ಈತನು ರಾಜನಾದ ರಾಜವೀರಸಿಂಹನ ಅಣ್ಣ.

ಬಿರಜೂ: ಈತನು ರಾಜನ ಅಣ್ಣನಾಗಿದ್ದು ಈ ಬಂದೀಖಾನೆಯಲ್ಲಿ ಏನು ಮಾಡುತ್ತಿದ್ದಾನೆ?

ಪರಮಾತ್ಮ: ವಾಸ್ತವದಲ್ಲಿ ದೊಡ್ಡ ರಾಜಕುಮಾರನಿಗೆ ರಾಜಸಿಂಹಾಸನದ ಮೇಲೆ ಅಧಿಕಾರವಿತ್ತು. ಮತ್ತು ಈತನು ಅದನ್ನು ಏರುವವನಿದ್ದನು. ಆದರೆ ರಾಜವೀರಸಿಂಹನು ಕುತಂತ್ರ ಮಾಡಿ ಅಣ್ಣನ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿ ಬಂದೀಖಾನೆಯಲ್ಲಿ ಹಾಕಿಸಿದನು. ನಂತರ ತಾನೇ ರಾಜನಾದನು.

ಬಿರಜೂ: ಇದಂತೂ ಈತನಿಗೆ ಬಹಳ ಅನ್ಯಾಯ ಮಾಡಿದಂತಾಯಿತು. ಈ ರಾಜನು ನಿಜವಾಗಿಯೂ ತುಂಬಾ ನಿರ್ದಯಿ ಮತ್ತು ಕ್ರೂರಿ. ಈತನು ತನ್ನ ಅಣ್ಣನನ್ನೂ ಬಿಡಲಿಲ್ಲ.

ಪರಮಾತ್ಮ: ಈಗ ಈ ವ್ಯಕ್ತಿಯು ವರ್ತಮಾನ ಜನ್ಮದಲ್ಲಿ ಯಾವ ರೂಪದಲ್ಲಿದ್ದಾನೆಂಬುದನ್ನು ಹೇಳಬಲ್ಲೆಯಾ?

ಬಿರಜೂ: ಇಲ್ಲ, ನಾನು ಈತನನ್ನೂ ಸಹ ತಿಳಿದಿಲ್ಲ. ಈ ವ್ಯಕ್ತಿ ಯಾರು?

ಪರಮಾತ್ಮ: ಇವನು ನಿನ್ನ ಪತ್ನಿ ರಮಾಳ ಪೂರ್ವಜನ್ಮ.

ಬಿರಜೂ: ಅಂದರೆ ಈತನು ರಮಾಳ ಆತ್ಮ. ಈತನಿಗೆ ನಿಜವಾಗಲೂ ಬಹಳ ಅನ್ಯಾಯವಾಗಿದೆ. ಬಹಶಃ ಈ ಕಾರಣಕ್ಕಾಗಿಯೇ ಆಕೆ ಬಹಳ ಸಿಡುಕುತನ ಮತ್ತು ಸಿಟ್ಟಿನ ಸ್ವಭಾವದವಳೂ ಆಗಿದ್ದಾಳೆ ಮತ್ತು ವಿನಾಕಾರಣ ನನ್ನೊಂದಿಗೆ ಜಗಳವಾಡುತ್ತ ಇರುತ್ತಾಳೆ. ಆದರೆ ರಮಾ ಸ್ತ್ರೀ. ಆದರೆ ಆಕೆ ತನ್ನ ಪೂರ್ವ ಜನ್ಮದಲ್ಲಿ ಪುರುಷ. ಇದು ಹೇಗೆ?

ಪರಮಾತ್ಮ: ನನ್ನ ಮಗೂ, ಆತ್ಮಕ್ಕೆ ಲಿಂಗಭೇದವಿಲ್ಲ. ಆತ್ಮ ಒಮ್ಮೆ ಸ್ತ್ರೀ ಜನ್ಮ ತೆಗೆದುಕೊಂಡರೆ, ಮತ್ತೊಮ್ಮೆ ಪುರುಷ ಜನ್ಮ ತೆಗೆದುಕೊಳ್ಳುತ್ತದೆ. ನೀನೂ ಸಹ ಅನೇಕ ಬಾರಿ ಸ್ತ್ರೀ ಜನ್ಮ ತೆಗೆದುಕೊಂಡಿರುವೆ ಮತ್ತು ಅನೇಕ ಬಾರಿ ಪುರುಷ ಜನ್ಮ ತೆಗೆದುಕೊಂಡಿರುವೆ.



ಪರಮಾತ್ಮ:ಸರಿ, ನೀನು ಇಲ್ಲಿಯತನಕ ಯಾರು ಯಾರನ್ನು ನೋಡಿದೆಯೋ ಅವರಲ್ಲಿ ನೀನು ಯಾರು ಎಂಬುದನ್ನು ಹೇಳು?

ಬಿರಜೂ: ತಾವು ನನ್ನನ್ನು ಯಾವ ಯಾವ ವ್ಯಕ್ತಿಗಳೊಂದಿಗೆ ಭೇಟಿ ಮಾಡಿಸಿದಿರಿ ಅವರೆಲ್ಲರನ್ನು ನೋಡಿದರೆ ನನಗೆ ರಾಜನಾದ ರಾಜವೀರಸಿಂಹ ನಾನೇ ಅನಿಸುತ್ತಿದೆ.

ಪರಮಾತ್ಮ: ಸರಿಯಾಗಿ ತಿಳಿದುಕೊಂಡೆ. ನಿನ್ನ ಪೂರ್ವ ಜನ್ಮದಲ್ಲಿ ರಾಜವೀರಸಿಂಹನಾಗಿದ್ದವನುನೀನೇ.

ಬಿರಜೂ: ನಾನು ನಿಜವಾಗಲೂ ಇಷ್ಟೊಂದು ಕ್ರೂರಿ, ಅನ್ಯಾಯಕೋರನಾಗಿದ್ದೆನೇ? ನಾನಂತೂ ಬಹಳಷ್ಟು ಪಾಪಕರ್ಮಗಳನ್ನು ಮಾಡಿದ್ದೇನೆ.

ಪರಮಾತ್ಮ: ಇಲ್ಲಿಯತನಕ ನೀನು ನಿನ್ನ ಪೂರ್ವ ಜನ್ಮದ ಕೇವಲ ಕೆಲವು ದೃಶ್ಯಗಳನ್ನು ಮಾತ್ರ ನೋಡಿದ್ದೀಯ. ಈ ಜನ್ಮದಲ್ಲಿ ನೀನು ರಾಜ್ಯಾಧಿಕಾರವನ್ನು ಪಡೆದು ಎಷ್ಟೊಂದು ಪಾಪಕರ್ಮಗಳನ್ನು ಮಾಡಿದ್ದೀಯ ಎಂದರೆ ಲೆಕ್ಕ ಮಾಡಿದರೆ ಅದು ಬಹು ದೊಡ್ಡದಾಗಿಬಿಡುತ್ತದೆ. ಬಲವಂತವಾಗಿ ನೀನು ಹಲವರನ್ನು ಬಂಧನದಲ್ಲಿಟ್ಟೆ, ಅನೇಕರ ಜಮೀನು, ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಂಡೆ, ಬಡವರಿಂದ ಅವರ ಸಾಮರ್ಥ್ಯಕ್ಕಿಂತ ಹೆಚ್ಚಿನ ಸುಂಕ ವಸೂಲಿ ಮಾಡಿದೆ, ವರ್ತಮಾನ ಜನ್ಮದಲ್ಲಿ ನಿನಗೆ ಇಷ್ಟೊಂದು ದುಃಖಗಳು ಯಾವ ಕಾರಣದಿಂದಸಿಗುತ್ತಿವೆ ಎಂಬುದು ಈಗ ನಿನಗೆ ಗೊತ್ತಾಯಿತು. ನೀನು ನಿನ್ನ ಪೂರ್ವ ಜನ್ಮದಲ್ಲಿ ಹೇಗೆ ಇಡೀ ಸಮಾಜಕ್ಕೆ ದುಃಖ ಕೊಟ್ಟೆಯೋ, ಅದೇ ರೀತಿ ಈಗಿನ ಜನ್ಮದಲ್ಲಿ ಇಡೀ ಸಮಾಜವು ನಿನಗೆ ದುಃಖ ಕೊಡುತ್ತಿದೆ. ನಿನ್ನ ಪೂರ್ವ ಜನ್ಮದಲ್ಲಿ ನೀನು ನಿನ್ನ ತಂದೆ ತಾಯಿಗಳಿಗೆ ಗೌರವ ಕೊಡಲಿಲ್ಲ. ಮತ್ತು ಮುಗ್ಧ ಮಕ್ಕಳಿಂದ ಅವರ ತಂದೆ ತಾಯಿಯ ನೆರಳನ್ನು ಕಸಿದುಕೊಂಡು ತಬ್ಬಲಿಗಳನ್ನಾಗಿ ಮಾಡಿದೆ, ಆ ಕಾರಣದಿಂದ ಈ ಜನ್ಮದಲ್ಲಿ ನಿನಗೆ ಅನಾಥ ಜೀವನವು ಸಿಕ್ಕಿತು.

ಬಿರಜೂ: ತಾವು ಸರಿಯಾಗಿ ಹೇಳಿದಿರಿ. ಈ ವರ್ತಮಾನ ಜನ್ಮವು ನನ್ನ ಪೂರ್ವ ಜನ್ಮಗಳ ಪಾಪಕರ್ಮಗಳ ಫಲವೇ ಆಗಿದೆ. ನಿಜವಾಗಲೂ ನಾನು ರಾಜನಾಗಿ ಜನರಿಗೆ ಬಹಳ ಅನ್ಯಾಯ ಮಾಡಿದ್ದೇನೆ. ನನ್ನ ಈ ಪೂರ್ವ ಜನ್ಮಗಳ ಕರ್ಮಗಳನ್ನು ನೋಡಿ ತುಂಬಾ ಆತ್ಮನಿಂದನೆಯ ಅನುಭೂತಿಯಾಗುತ್ತಿದೆ. ನನ್ನ ಈಗಿನ ಜನ್ಮದ ಬಗ್ಗೆ ನನಗೆ ತಿರಸ್ಕಾರ ಉಂಟಾಗುತ್ತಿದೆ.

ಪರಮಾತ್ಮ: ಕಳೆದುದನ್ನು ಕುರಿತು ಈಗ ಯೋಚಿಸುವುದರಿಂದ ಏನೂ ಲಾಭವಿಲ್ಲ. ಬದಲಿಗೆ ನೀನು ನಿನ್ನ ಭವಿಷ್ಯವನ್ನು ಸುಧಾರಣೆ ಮಾಡಿಕೊಳ್ಳುವುದಕ್ಕಾಗಿ ವರ್ತಮಾನ ಜೀವನವನ್ನು ಹಸನು ಮಾಡಿಕೊಳ್ಳಬೇಕು ಮತ್ತು ಶ್ರೇಷ್ಠ ಕರ್ಮ ಮಾಡಬೇಕು.



ಪರಮಾತ್ಮ:ನನ್ನ ಮಧುರ ಮಗೂ, ನಿನ್ನ ಜೀವನದಲ್ಲಿ ಏನೆಲ್ಲ ಕೆಡುಕಾಗಿದೆಯೋ ಅದಕ್ಕೆ ಸ್ವತಃ ನೀನೇ ಜವಾಬ್ದಾರಿಯಾಗಿದ್ದೀಯ ಎಂಬುದನ್ನು ನೀನು ಈಗಲಾದರೂ ಒಪ್ಪಿಕೊಳ್ಳುವೆಯಾ? ನಾನು ನಿನಗೆ ಎಂದೂ ಕೇಡುಬಗೆಯಲಿಲ್ಲ. ಮತ್ತು ನಾನು ನಿನಗೆ ಎಂದೂ ದುಃಖ ನೀಡಲಿಲ್ಲ.

ಇದನ್ನು ಕೇಳುತ್ತಿದ್ದಂತೆ ಬಿರಜೂಗೆ ಕಣ್ಣೀರು ಬಂದುಬಿಟ್ಟಿತು. ಆತನಿಗೆ ತನ್ನಿಂದಾದ ತಪ್ಪುಗಳ ಮನವರಿಕೆಯಾಗಿತ್ತು. ಆತನು ಪರಮಾತ್ಮನೆದುರು ತಲೆಬಾಗಿ ಕ್ಷಮೆಯಾಚಿಸತೊಡಗಿದನು.

ಬಿರಜೂ: ನಾನು ನಿಮ್ಮ ಮೇಲೆ ಇಷ್ಟೊಂದು ಆರೋಪ ಹೊರಿಸಿದುದಕ್ಕೆ ನನ್ನನ್ನು ಕ್ಷಮಿಸಿರಿ. ನನಗೆ ನನ್ನ ಕರ್ಮಗಳ ಜ್ಞಾನವಿರಲಿಲ್ಲ. ನಾನು ಇಡೀ ಜೀವನವೆಲ್ಲ ನನ್ನ ದೌರ್ಭಾಗ್ಯಕ್ಕಾಗಿ ತಮ್ಮನ್ನೇ ಹೊಣೆ ಮಾಡಿದೆನು. ನನ್ನಿಂದ ಬಹು ದೊಡ್ಡ ಪಾಪವಾಗಿಬಿಟ್ಟಿದೆ. ಕೃಪೆ ಮಾಡಿ ಈ ಮಹಾಪಾಪಕ್ಕೆ ನನ್ನನ್ನು ಕ್ಷಮಿಸಿರಿ. ನಾನು ಇನ್ನು ಮುಂದೆ ಎಂದೂ ನನ್ನ ದೌರ್ಭಾಗ್ಯಕ್ಕೆ ತಮ್ಮ ಮೇಲಾಗಲಿ, ಬೇರೆಯವರ ಮೇಲಾಗಲಿ ದೋಷ ಹೊರಿಸುವುದಿಲ್ಲವೆಂದು ವಚನ ನೀಡುತ್ತೇನೆ.

ಪರಮಾತ್ಮ: ನನ್ನ ಮಗೂ, ನಾನು ಎಂದೂ ನಿನ್ನನ್ನು ದೋಷಿಯೆಂದು ಪರಿಗಣಿಸಿಲ್ಲ. ಆದರೂ ನಾನು ನಿನ್ನನ್ನು ಕ್ಷಮಿಸುತ್ತೇನೆ.

ಬಿರಜೂ: ಹೇ ಪ್ರಭೂ, ತಾವು ನಿಜವಾಗಲೂ ತುಂಬಾ ದಯಾಹೃದಯಿ. ತಾವು ದಯಾಸಾಗರರಾಗಿದ್ದೀರಿ. ತಾವು ನನಗೆ ಇಷ್ಟೊಂದು ಶ್ರೇಷ್ಠ ಮಾರ್ಗ ತಿಳಿಸಿದುದಕ್ಕೆ ನಾನು ತಮಗೆ ತುಂಬಾ ತುಂಬಾ ಋಣಿಯಾಗಿದ್ದೇನೆ. ಇಲ್ಲವೆಂದರೆ ನಾನು ಜೀವನದಲ್ಲಿ ಇನ್ನೆಷ್ಟು ಪಾಪಗಳನ್ನು ಮಾಡುತ್ತಿದ್ದೆನೋ ಗೊತ್ತಿಲ್ಲ.

ಪರಮಾತ್ಮ: ಈಗ ನಿನಗೆ ಕರ್ಮಗಳ ಜ್ಞಾನ ಬಂದಿರಬಹುದು. ಆದರೂ ಸಹ ನೀನು ನಿನ್ನ ಪೂರ್ವಜನ್ಮದ ಕರ್ಮಗಳ ಫಲವನ್ನಂತೂ ಭೋಗಿಸಲೇಬೇಕಾಗುತ್ತದೆ.

ಬಿರಜೂ: ತಮ್ಮ ಜೊತೆಯ ಈ ಮಿಲನದ ನಂತರ ನನ್ನ ಜೀವನ ಧನ್ಯವಾಗಿಬಿಟ್ಟಿದೆ. ತಾವು ನನ್ನಲ್ಲಿ ಈಗ ಎಷ್ಟೊಂದು ಶಕ್ತಿ ತುಂಬಿದ್ದೀರಿ ಎಂದರೆ ನಾನು ನನ್ನ ಜೀವನದ ಪ್ರತಿಯೊಂದೂ ಸವಾಲನ್ನು ಎದುರಿಸಲು ಸಿದ್ಧನಾಗಿದ್ದೇನೆ.



ಬಿರಜೂ:ಹೇ ಪ್ರಭೂ, ಯಾವ ಕಾರಣಗಳಿಂದ ನನಗೆ ಇಷ್ಟೊಂದು ದುಃಖದಾಯಕ ಜೀವನ ಸಿಕ್ಕಿತೆಂದು ನನಗೆ ಗೊತ್ತಾಯಿತು. ಆದರೆ ಯಾವ ಕಾರಣಗಳಿಂದ ನನಗೆ ರಾಜನ ಜನ್ಮವು ಸಿಕ್ಕಿತ್ತು ಎಂಬುದನ್ನು ತಿಳಿಸಬಲ್ಲಿರಾ?

ಪರಮಾತ್ಮ: ಹೇಗೆ ನಿನಗೆ ಪಾಪಕರ್ಮಗಳಿಗೆ ಫಲವಾಗಿ ಇಷ್ಟೊಂದು ದುಃಖದಾಯಕ ಜೀವನ ಸಿಕ್ಕಿತೋ, ಹಾಗೆ ಅದಕ್ಕಿಂತಲೂ ಹಿಂದಿನ ಜನ್ಮಗಳಲ್ಲಿ ಸಾಕಷ್ಟು ಪುಣ್ಯಕರ್ಮಗಳನ್ನು ಮಾಡಿದ್ದ ಕಾರಣದಿಂದಲೇ ಒಂದು ರಾಜನ ಜೀವನ ಸಿಕ್ಕಿತ್ತು. ಅದಕ್ಕಿಂತಲೂ ಪೂರ್ವದಲ್ಲಿ ನೀನು ಒಬ್ಬ ದೊಡ್ಡ ದಾನಿಯಾಗಿದ್ದೆ. ನೀನು ನಿನ್ನ ಜೀವನದಲ್ಲಿ ಅನೇಕರಿಗೆ ಸಹಾಯ ಮಾಡಿದ್ದೆ. ಈ ಕಾರಣ ಅವರೆಲ್ಲರ ಆಶೀರ್ವಾದಗಳು ನಿನಗೆ ಸಿಕ್ಕಿದ್ದವು. ಆ ಶ್ರೇಷ್ಠ ಕರ್ಮಗಳ ಕಾರಣವೇ ನಿನಗೆ ಒಂದು ಜನ್ಮ ಸುಖದ ಜೀವನ ಸಿಕ್ಕಿತು.

ಬಿರಜೂ: ನನ್ನ ಮನದಲ್ಲಿ ಒಂದು ಪ್ರಶ್ನೆ ಮೂಡುತ್ತಿದೆ. ನಾನು ಇಷ್ಟೊಂದು ಒಳ್ಳೆಯವನಾಗಿದ್ದವನು ನಂತರದ ಜನ್ಮದಲ್ಲಿ ಇಷ್ಟೊಂದು ಕೆಟ್ಟವನಾದುದು ಹೇಗೆ?

ಪರಮಾತ್ಮ: ವಾಸ್ತವದಲ್ಲಿ ಈ ಜನ್ಮದಲ್ಲಿ ಚಿಕ್ಕಂದಿನಿಂದಲೇ ನಿನಗೆ ದುಷ್ಟಸ್ನೇಹಿತರ ಸಹವಾಸ ಸಿಕ್ಕಿತು. ಸಂಗದ ರಂಗು ಹತ್ತಿತು. ಇದರ ಪರಿಣಾಮವಾಗಿ ಬಾಲ್ಯದಿಂದಲೇ ನಿನ್ನ ಆಚಾರ–ವ್ಯವಹಾರ ಕೆಡಲು ಪ್ರಾರಂಭವಾಯಿತು. ನಿನಗೆ ಎಲ್ಲರ ಮೇಲೆ ದರ್ಪ ತೋರಿಸುವುದು ಅಭ್ಯಾಸವಾಗಿಬಿಟ್ಟಿತು. ಅದರಿಂದ ನೀನು ಇಷ್ಟೊಂದು ದುರಭಿಮಾನಿ, ಕ್ರೋಧಿ ಮತ್ತು ಕ್ರೂರನಾಗಿಬಿಟ್ಟೆ.

ಬಿರಜೂ: ಆತ್ಮನು ಪ್ರತಿ ಜನ್ಮದಲ್ಲಿಯೂ ಸುಖಿಯಾಗುವಂತಹ ಯಾವುದೇ ಉಪಾಯವಿಲ್ಲವೇ?

ಪರಮಾತ್ಮ: ಸುಖದ ನಂತರ ದುಃಖ ಮತ್ತು ದುಃಖದ ನಂತರ ಸುಖ ಸಿಗುವುದು ನಿಶ್ಚಿತವಾಗಿದೆ. ಈ ವಿಶ್ವದಲ್ಲಿ ಸದಾ ಸುಖಿಯಾಗಿರುವಂತಹ ಅಥವಾ ಸದಾ ದುಃಖಿಯಾಗಿರುವಂತಹ ವ್ಯಕ್ತಿಗಳು ಯಾರೂ ಇಲ್ಲ. ಸುಖ–ದುಃಖ ಜೀವನದ ಎರಡು ಮಗ್ಗುಲುಗಳಾಗಿವೆ. ಮತ್ತು ಇವುಗಳನ್ನು ಪ್ರತಿಯೊಬ್ಬ ಮನುಷ್ಯನೂ ಭೋಗಿಸಲೇಬೇಕಾಗುತ್ತದೆ.




ಬಿರಜೂ: ಆದರೆ ಆತ್ಮನು ಸದಾ ಸುಖಿಯಾಗಿರುವಂತಹ ಯಾವುದಾದರೂ ಉಪಾಯವು ಅವಶ್ಯವಾಗಿ ಇರಬಹುದೇ?

ಪರಮಾತ್ಮ: ಕರ್ಮಗಳ ಗತಿಯ ಜ್ಞಾನವೇ ಆ ಉಪಾಯ. ಒಂದು ವೇಳೆ ಮನುಷ್ಯನಿಗೆ ಪ್ರತಿ ಜನ್ಮದಲ್ಲಿ ಕರ್ಮಗಳ ಜ್ಞಾನವಿದ್ದರೆ ಮತ್ತು ಆತನು ಸದಾ ಸತ್ಕರ್ಮಗಳನ್ನೇ ಮಾಡುತ್ತಿದ್ದರೆ ಅವನು ಸದಾ ಸುಖಿಯಾಗಿರಬಲ್ಲನು. ಆದರೆ ಒಂದು ವೇಳೆ ಆತನಿಗೆ ಕರ್ಮ ವಿಕರ್ಮ ಎಂದರೆ ಏನೆಂದು ಗೊತ್ತೇ ಇಲ್ಲವೆಂದರೆ, ಆತನು ತನ್ನ ಜೀವನದಲ್ಲಿ ಸತ್ಕರ್ಮಗಳ ಜೊತೆಗೆ ವಿಕರ್ಮಗಳನ್ನೂ ಮಾಡಿಬಿಡುತ್ತಾನೆ. ಮತ್ತೆ ಅದರ ಫಲವನ್ನು ಆತನು ಭೋಗಿಸಲೇಬೇಕಾಗುತ್ತದೆ.

ಬಿರಜೂ: ಹೇ ಈಶ್ವರ, ಯಾವ ಕರ್ಮಗಳಿಗೆ ನಾವು ಸತ್ಕರ್ಮವೆಂದು ತಿಳಿಯಬೇಕು, ಮತ್ತೆ ಯಾವ ಕರ್ಮಗಳಿಗೆ ನಾವು ವಿಕರ್ಮ ಎನ್ನಬೇಕು ಎಂಬುದನ್ನು ತಿಳಿಸಬಲ್ಲಿರಾ?

ಪರಮಾತ್ಮ: ನೀನು ಬಹಳ ಒಳ್ಳೆಯ ಪ್ರಶ್ನೆ ಕೇಳಿದೆ. ವಾಸ್ತವದಲ್ಲಿ ಸ್ವಯಂ ನಮಗೂ ಮತ್ತು ಅನ್ಯರಿಗೂ ಸುಖ ನೀಡುವ ಕರ್ಮಗಳಿಗೆ ಸತ್ಕರ್ಮವೆನ್ನಲಾಗುತ್ತದೆ. ಎರಡನೆಯದಾಗಿ ತಿಳಿದೋ ತಿಳಿಯದೆಯೋ ಯಾರಿಗಾದರೂ ದುಃಖ ಕೊಟ್ಟರೆ ಅದನ್ನು ವಿಕರ್ಮವೆನ್ನಲಾಗುತ್ತದೆ. ಹೇಗೆ ಯಾರನ್ನಾದರೂ ಹೊಡೆದರೆ, ಬಡಿದರೆ, ಯಾವುದೇ ಪ್ರಕಾರದಿಂದ ದುಃಖ ನೀಡಿದರೆ ಅದು ವಿಕರ್ಮವೆನಿಸುತ್ತದೆ. ಹಾಗೆಯೇ ಯಾರಿಗಾದರೂ ಸಹಾಯ ಮಾಡಿದರೆ, ಎಲ್ಲರಿಗೂ ಒಳಿತು ಮಾಡಿದರೆ ಅದಕ್ಕೆ ಪುಣ್ಯಕರ್ಮವೆನ್ನಲಾಗುತ್ತದೆ. ಎಲ್ಲಿಯತನಕ ಎಂದರೆ, ಮನಸ್ಸಿನಿಂದಲೂ ಯಾರ ಬಗ್ಗೆಯಾದರೂ ಕೆಟ್ಟ ಸಂಕಲ್ಪ ಮಾಡಿದರೂ, ಬಾಯಿಯಿಂದ ಕೆಟ್ಟ ಮಾತನ್ನಾಡಿದರೂ ಸಹ ವಿಕರ್ಮವೇ ಆಗಿಬಿಡುತ್ತದೆ.

ಬಿರಜೂ: ಮತ್ತೆ ಯಾವ ಆಧಾರದಿಂದ ಒಬ್ಬ ವ್ಯಕ್ತಿ ಸದಾ ಒಳ್ಳೆಯ ಕರ್ಮ ಮಾಡಲು ಸಾಧ್ಯವಿದೆ?

ಪರಮಾತ್ಮ: ಸರಿಯಾದ ಜ್ಞಾನವೇ ಒಬ್ಬ ವ್ಯಕ್ತಿಗೆ ಸರಿಯಾದ ಮಾರ್ಗ ತೋರಿಸಬಲ್ಲುದು. ಜ್ಞಾನದಿಂದಲೇ ವ್ಯಕ್ತಿಯ ಜೀವನದಲ್ಲಿ ಆದರ್ಶಗಳು ಬರಬಲ್ಲವು. ಮತ್ತು ಈ ಆದರ್ಶಗಳೇ ಆತನನ್ನು ಸತ್ಕರ್ಮ ಮಾಡಲು ಪ್ರೇರಣೆ ನೀಡುತ್ತವೆ. ವಾಸ್ತವದಲ್ಲಿ ಜ್ಞಾನದಿಂದಲೇ ಯಾವುದೇ ವ್ಯಕ್ತಿ ತಮ್ಮ ಜೀವನವನ್ನು ಶ್ರೇಷ್ಠವನ್ನಾಗಿ ರೂಪಿಸಿಕೊಳ್ಳಬಲ್ಲನು.



ಬಿರಜೂ: ಒಂದು ಜನ್ಮದಲ್ಲಿ ಕೆಲವು ಪುಣ್ಯಕರ್ಮಗಳನ್ನು ಮಾಡಿ ನಂತರ ಪ್ರತಿ ಜನ್ಮವೂ ಅವುಗಳ ಫಲವನ್ನು ಪಡೆಯುವುದು ಸಾಧ್ಯವೇ?

ಪರಮಾತ್ಮ: (ಮುಗುಳ್ನಗುತ್ತ) ನೀನು ನನ್ನಿಂದ ಕರ್ಮಗಳ ಎಲ್ಲ ರಹಸ್ಯಗಳನ್ನೂ ತಿಳಿದುಕೊಳ್ಳುತ್ತಲೇ ಹೋಗುವೆ ಎನಿಸುತ್ತಿದೆ. ಈಗ ನೀನು ಕೇಳುತ್ತಿರುವ ಪ್ರಶ್ನೆಗೆ ಉತ್ತರಿಸುವ ಮುನ್ನ ನಿನಗೆ ಒಂದು ಕಥೆಯನ್ನು ಹೇಳುತ್ತೇನೆ;

ಒಬ್ಬ ರಾಜನಿಗೆ ಇಬ್ಬರು ಮಕ್ಕಳಿದ್ದರು. ಒಮ್ಮೆ ಆತನ ಬಳಿ ಒಬ್ಬ ಮಹಾತ್ಮರು ದಯಮಾಡಿಸಿದರು. ಅವರನ್ನು ರಾಜನು ತುಂಬಾ ಆದರದಿಂದ ಬರಮಾಡಿಕೊಂಡು ಬಹಳ ಚೆನ್ನಾಗಿ ಸೇವೆ ಮಾಡಿದನು. ಮಹಾತ್ಮರು ಆತನ ಸೇವೆಯಿಂದ ಪ್ರಸನ್ನರಾಗಿ ಆತನಿಗೆ ಎರಡು ಚಮತ್ಕಾರವುಳ್ಳ ಹಣ್ಣುಗಳನ್ನು ಕೊಟ್ಟರು. ಮತ್ತು ಅವುಗಳ ವಿಶೇಷತೆಯನ್ನು ತಿಳಿಸುತ್ತ 'ಇವುಗಳನ್ನು ತಿನ್ನುವುದರಿಂದ ಆಯುಷ್ಯವು ಹೆಚ್ಚಾಗುತ್ತದೆ' ಎಂದರು. ರಾಜನಿಗೆ ಆ ಹಣ್ಣುಗಳನ್ನು ತನ್ನ ಇಬ್ಬರು ಮಕ್ಕಳಿಗೆ ಕೊಡಬೇಕೆನಿಸಿತು. ಆತನು ಅವರನ್ನು ಕರೆದು ಅವರಿಬ್ಬರಿಗೂ ಒಂದೊಂದು ಹಣ್ಣನ್ನು ಕೊಟ್ಟು ಅದರ ವಿಶೇಷತೆಗಳನ್ನು ತಿಳಿಸಿ ಅವುಗಳನ್ನು ತಿನ್ನಲು ಹೇಳಿದನು. ರಾಜಕುಮಾರರಲ್ಲಿ ಒಬ್ಬನು ತನಗೆ ನೀಡಿದ್ದ ಹಣ್ಣನ್ನು ಅವಸರದಿಂದ ತಿಂದುಬಿಟ್ಟನು. ಇನ್ನೊಬ್ಬನೂ ಸಹ ತನಗೆ ನೀಡಿದ್ದ ಹಣ್ಣನ್ನೇನೋ ತಿಂದನು. ಆದರೆ ಆತನು ಅದರ ಬೀಜವನ್ನು ಎಚ್ಚರಿಕೆಯಿಂದ ತೆಗೆದಿಟ್ಟುಕೊಂಡು, ಅದನ್ನು ನೆಲದಲ್ಲಿ ಬಿತ್ತಿ, ಅನೇಕ ವರ್ಷಗಳವರೆಗೆ ನೀರು, ಗೊಬ್ಬರ ಹಾಕಿ ಜೋಪಾನ ಮಾಡಿದನು. ಅದು ಮೊಳೆತು ಗಿಡವಾಗಿ, ಮರವಾಗಿ ಅನೇಕ ಹಣ್ಣುಗಳನ್ನು ನೀಡಿತು. ಅವುಗಳನ್ನು ತಿನ್ನುತ್ತ ಎರಡನೆಯ ರಾಜಕುಮಾರನು ತನ್ನ ಆಯುಷ್ಯವನ್ನು ಅನೇಕ ಪಟ್ಟು ಹೆಚ್ಚಿಸಿಕೊಂಡನು.

ಪರಮಾತ್ಮ: ಈ ಕಥೆಯಿಂದ ನಿನಗೆ ಏನು ತಿಳಿಯಿತು?

ಬಿರಜೂ: ನನ್ನ ವಿಚಾರವೇನೆಂದರೆ ಎರಡನೇ ರಾಜಕುಮಾರನು ತುಂಬಾ ಬುದ್ಧಿವಂತನಾಗಿದ್ದನು. ಆತನು ತನ್ನ ಒಂದು ಹಣ್ಣು ಇರುವುದನ್ನು ಅನೇಕ ಹಣ್ಣುಗಳನ್ನಾಗಿ ಮಾಡಿಕೊಂಡನು. ಒಂದು ವೇಳೆ ಮೊದಲನೇ ರಾಜಕುಮಾರನೂ ಸಹ ಹಾಗೆಯೇ ಮಾಡಿದ್ದರೆ ಆತನ ಬಳಿಯೂ ಸಹ ಅನೇಕ ಹಣ್ಣುಗಳಿರುತ್ತಿದ್ದವು. ಆದರೆ ನನ್ನ ಪ್ರಶ್ನೆಗೂ ಈ ಕಥೆಗೂ ಏನು ಸಂಬಂಧವಿದೆ?



ಪರಮಾತ್ಮ: (ಮುಗುಳ್ನಗುತ್ತ) ನೋಡು, ಚಮತ್ಕಾರಿ ಹಣ್ಣು ಎಂದರೆ ನಮ್ಮ ಶ್ರೇಷ್ಠ ಕರ್ಮಗಳ ಫಲ. ಇಬ್ಬರು ರಾಜಕುಮಾರರಿಗೂ ಸಹ ತಮ್ಮ ತಮ್ಮ ಪೂರ್ವ ಜನ್ಮದ ಕರ್ಮಗಳ ಅನುಸಾರವಾಗಿ ಒಂದೇ ರೀತಿಯ ಫಲ ಸಿಕ್ಕಿತು. ಆದರೆ ಒಬ್ಬನು ಅದನ್ನು ತಿಂದುಂಡು ಸಮಾಪ್ತಿ ಮಾಡಿಕೊಂಡನು. ಮತ್ತು ಎರಡನೆಯವನು ಆ ಫಲವನ್ನೇನೋ ತಿಂದನು. ಆದರೆ ಆತನು ಜೊತೆಗೆ ಅದರ ಬೀಜವನ್ನೂ ಬಿತ್ತಿ, ಭವಿಷ್ಯಕ್ಕಾಗಿಯೂ ಅನೇಕ ಫಲಗಳನ್ನು ಮಾಡಿಕೊಂಡನು. ಇದರ ತಾತ್ಪರ್ಯವೇನೆಂದರೆ ಯಾರಾದರೂ ಹಿಂದಿನ ಜನ್ಮದಲ್ಲಿ ಸತ್ಕರ್ಮಗಳನ್ನು ಮಾಡಿದ್ದರೆ ಆತನಿಗೆ ಸುಖದ ಜೀವನ ಸಿಗುತ್ತದೆ. ಮತ್ತು ಒಂದು ವೇಳೆ ಈ ಜನ್ಮದಲ್ಲಿಯೂ ಸಹ ಸತ್ಕರ್ಮಗಳನ್ನು ಮಾಡಿದರೆ ನಂತರದ ಜನ್ಮದಲ್ಲಿಯೂ ಸಹ ಸುಖದ ಜೀವನ ಸಿಗುವುದು ನಿಶ್ಚಿತವಾಗುತ್ತದೆ. ಆದರೆ ಈ ಜನ್ಮದಲ್ಲಿ ವಿಕರ್ಮಗಳನ್ನು ಮಾಡಿದರೆ ನಂತರದ ಜನ್ಮದಲ್ಲಿ ದುಃಖಮಯ ಜೀವನ ಸಿಗುವುದೂ ಸಹ ನಿಶ್ಚಿತವಾಗಿಬಿಡುತ್ತದೆ.

ಬಿರಜೂ: ಇದರ ಅರ್ಥವೇನೆಂದರೆ ಒಂದು ವೇಳೆ ಯಾರಿಗಾದರೂ ಸುಖೀ ಶ್ರೀಮಂತ ಜೀವನ ಸಿಕ್ಕಿದೆ ಎಂದಾಗ ಅದನ್ನು ಕೇವಲ ತನಗಾಗಿ ಉಪಯೋಗಿಸದೇ, ಈ ಜನ್ಮದಲ್ಲಿಯೂ ಸಹ ಶ್ರೇಷ್ಠ ಕರ್ಮಗಳನ್ನು ಮಾಡಿ ಭವಿಷ್ಯದ ಜೀವನವನ್ನೂ ಸಹ ಶ್ರೇಷ್ಠ ಮಾಡಿಕೊಳ್ಳಬೇಕು ಎಂದು.

ಪರಮಾತ್ಮ: ಸರಿಯಾಗಿ ತಿಳಿದುಕೊಂಡೆ. ಆದರೆ ವಾಸ್ತವವಾಗಿ ಬಹಳಷ್ಟು ಜನರು ಮೊದಲನೇ ರಾಜಕುಮಾರನಂತೆ ಕರ್ಮದ ಫಲವನ್ನು ತಿಂಡುಂಡು ಸಮಾಪ್ತಿ ಮಾಡಿಕೊಳ್ಳುವರು.

ಬಿರಜೂ: ಹೇ ಪ್ರಭೂ, ನಾವು ಈ ಕರ್ಮಗಳ ಬಂಧನದಿಂದ ಸದಾ ಕಾಲಕ್ಕಾಗಿ ಬಿಡುಗಡೆಯಾಗುವ ಯಾವ ಉಪಾಯವೂ ಇಲ್ಲವೇ? ನಾವು ಒಂದಾದ ನಂತರ ಇನ್ನೊಂದು, ಈ ರೀತಿ ಜನ್ಮ ಪಡೆಯುತ್ತಲೇ ಇರಬೇಕೇ?

ಪರಮಾತ್ಮ: ಕರ್ಮಗಳ ಬಂಧನದಿಂದ ಯಾರೂ ಸದಾ ಕಾಲಕ್ಕಾಗಿ ಬಿಡುಗಡೆಯಾಗಲು ಸಾಧ್ಯವಿಲ್ಲ. ಯಾವುದೇ ಆತ್ಮ ಈ ಧರೆಗೆ ಬರುತ್ತದೆ ಎಂದರೆ ಅದು ಕರ್ಮಗಳ ಬಂಧನದಲ್ಲಿ ಕಟ್ಟಿಹಾಕಲ್ಪಡುವುದು ಖಚಿತ. ಹುಟ್ಟಿನ ನಂತರ ಸಾವು ನಿಶ್ಚಿತ. ಹಾಗೆ ಸಾವಿನ ನಂತರ ಹುಟ್ಟು ನಿಶ್ಚಿತ. ಇದೊಂದು ಅನಾದಿ, ಅವಿನಾಶಿ ಚಕ್ರವಾಗಿದೆ. ಇದು ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಈ ಅವಿನಾಶಿ ಚಕ್ರದ ಕಾರಣವೇ ಇಂದು ಇಡೀ ಪ್ರಪಂಚದಲ್ಲಿ ಸ್ಥಿರತೆ ಮತ್ತು ಸಮತೋಲನ ಇದೆ.




ಬಿರಜೂ: ನಾವೆಲ್ಲ ಆತ್ಮರು ಈ ಧರೆಗೆ ಎಲ್ಲಿಂದ ಬರುತ್ತೇವೆ. ಆತ್ಮರು ಈ ಧರೆಯ ಮೂಲನಿವಾಸಿಗಳಲ್ಲವೇ?

ಪರಮಾತ್ಮ: ಎಲ್ಲ ಆತ್ಮರ ನಿಜವಾದ ಮನೆ ಈ ಭೂಮಿಯಲ್ಲ. ಆದರೆ ಈ ಭೂಮಿಯಿಂದ ತುಂಬಾ ದೂರ, ಸೂರ್ಯ, ಚಂದ್ರ, ನಕ್ಷತ್ರಗಳ ಆಚೆ ಪರಮಧಾಮವಿದೆ. ಅದಕ್ಕೆ ಬ್ರಹ್ಮಲೋಕವೆಂತಲೂ ಹೇಳುತ್ತಾರೆ. ಅದೇ ನನ್ನ ಮತ್ತು ನಿಮ್ಮ ನಿಜವಾದ ಧಾಮವಾಗಿದೆ. ಅದು ಒಂದು ಕೆಂಪು ಪ್ರಕಾಶದ ಪ್ರಪಂಚವಾಗಿದೆ. ಆ ಲೋಕದಲ್ಲಿ ಎಲ್ಲ ಆತ್ಮರೂ ತಮ್ಮ ಬೀಜ ರೂಪದಲ್ಲಿ, ಬಿಂದು ರೂಪದಲ್ಲಿ ಪರಮ ಆತ್ಮನಾದ ನನ್ನ ಜೊತೆಯಲ್ಲಿ ಇರುತ್ತಾರೆ.

ಮತ್ತೆ ಪರಮಾತ್ಮನು ಬಿರಜೂವಿಗೆ ಪರಮಧಾಮದ ದೃಶ್ಯ ತೋರಿಸಿದರು. ಅಲ್ಲಿ ನಾಲ್ಕೂ ಕಡೆ ಕೆಂಪು ಬಣ್ಣದ ಪ್ರಕಾಶವೇ ಪ್ರಕಾಶವಿತ್ತು. ಆ ಕೆಂಪು ಪ್ರಕಾಶದ ಮಧ್ಯೆ, ನಕ್ಷತ್ರಗಳಂತೆ ಅನೇಕ ಆತ್ಮಗಳು ಹೊಳೆಯುತ್ತಿದ್ದವು. ಆ ಆತ್ಮಗಳೆಲ್ಲವೂ ಸೇರಿ ತಲೆಕೆಳಗಾದ ಒಂದು ವೃಕ್ಷದ ಆಕಾರದಲ್ಲಿದ್ದವು. ಆ ಆತ್ಮಗಳ ವೃಕ್ಷದ ಎಲ್ಲಕ್ಕಿಂತ ಮೇಲೆ ಜ್ಯೋತಿಬಿಂದು ಪರಮಾತ್ಮ ಹೊಳೆಯುತ್ತಿದ್ದಾರೆ. ಸ್ವಲ್ಪ ಹೊತ್ತು ಬಿರಜೂನ ಸೂಕ್ಷ್ಮಶರೀರವೂ ಸಹ ಅದೃಶ್ಯವಾಯಿತು. ಕೇವಲ ಆತನ ಆತ್ಮ ಮಾತ್ರ ಉಳಿದುಕೊಂಡಿತು. ಆತನೂ ಸಹ ಸ್ವಯಂ ತನ್ನನ್ನು ಆತ್ಮನೆಂದು ಅನುಭವ ಮಾಡತೊಡಗಿದ್ದನು. ಇಂತಹ ಅಲೌಕಿಕ ಅನುಭವವನ್ನು ಆತನು ತನ್ನ ಜೀವಮಾನದಲ್ಲಿ ಎಂದೂ ಮಾಡಿರಲಿಲ್ಲ. ಸ್ವಲ್ಪ ಹೊತ್ತಿನ ಸಲುವಾಗಿ ಆತನು ಎಲ್ಲ ಕರ್ಮ ಬಂಧನಗಳಿಂದ ಮುಕ್ತನಾಗಿಹೋದನು. ಮತ್ತೆ ಬಿರಜೂ ತನ್ನ ಶಾರೀರಿಕ ರೂಪದಲ್ಲಿ ಬಂದನು.

ಬಿರಜೂ: ಎಂತಹ ದಿವ್ಯ ಮತ್ತು ಅಲೌಕಿಕ ಅನುಭವವಾಗಿತ್ತು, ಹೇ ಪ್ರಭೂ, ಈ ಲೋಕದಲ್ಲಿ ಆತ್ಮರು ಏನು ಮಾಡುತ್ತಾರೆ?

ಪರಮಾತ್ಮ: ಈ ಲೋಕದಲ್ಲಿ ಎಲ್ಲ ಆತ್ಮರೂ ಶಾಂತವಾಗಿರುತ್ತಾರೆ. ಇಲ್ಲಿ ಆತ್ಮರು ಕರ್ಮಗಳಿಂದ ಮುಕ್ತರಾಗಿ ಇರುತ್ತಾರೆ. ಈ ಲೋಕದಲ್ಲಿ ಆತ್ಮರು ತಮ್ಮ ಅನಾದಿ ರೂಪದಲ್ಲಿರುತ್ತಾರೆ. ವಿಶ್ವನಾಟಕದ ರಂಗಸ್ಥಳದಲ್ಲಿ ತಾವು ಪ್ರವೇಶಿಸಲು ಅನುಕೂಲಕರ ಸಂದರ್ಭ ಬರುವವರೆಗೂ ಈ ಲೋಕದಲ್ಲಿ ಆತ್ಮರು ನಿರೀಕ್ಷಣೆಯಲ್ಲಿರುತ್ತಾರೆ. ಆ ಸಮಯವು ಬಂದ ತಕ್ಷಣ ಆತ್ಮವು ಪರಮಧಾಮವನ್ನು ಬಿಟ್ಟು ಧರೆಗೆ ಬಂದು ಜನ್ಮ ಪಡೆಯುತ್ತದೆ.




ಬಿರಜೂ: ತಾವು ಈ ವಿಶ್ವಕ್ಕೆ ನಾಟಕರಂಗವೆಂದು ಏಕೆ ಕರೆದಿರಿ?

ಏಕೆಂದರೆ ಈ ವಿಶ್ವವು ಒಂದು ರಂಗಮಂಟಪವಾಗಿದೆ. ಇದು ಎಲ್ಲ ಆತ್ಮರ ಸಾಮೂಹಕ ಆಟವೇ ಆಗಿದೆ. ಹೇಗೆ ಯಾವುದೇ ನಾಟಕದಲ್ಲಿ ಕಲಾವಿದರು ತಮಗೆ ತಕ್ಕ ವೇಷವನ್ನು ಧಾರಣೆ ಮಾಡಿಕೊಂಡು ತಮ್ಮ ನಿರ್ಧಾರಿತ ಸಮಯದಲ್ಲಿ ರಂಗಸ್ಥಳಕ್ಕೆ ಬಂದು ಅಭಿನಯಿಸುವರೋ ಹಾಗೆ ಈ ವಿಶ್ವವೆಂಬ ರಂಗಸ್ಥಳದಲ್ಲಿ ಆತ್ಮರು ಬಂದು ಕಲಾವಿದರಂತೆ ತಮ್ಮ ಪಾತ್ರವನ್ನು ಮಾಡುತ್ತಾರೆ.

ಬಿರಜೂ: ಒಂದು ವೇಳೆ ಇದು ನಾಟಕವಾಗಿದ್ದರೆ, ಈ ನಾಟಕದ ಪ್ರಾರಂಭವು ಯಾವಾಗ ಆಗುತ್ತದೆ ಮತ್ತು ಅಂತ್ಯವು ಯಾವಾಗ ಆಗುತ್ತದೆ?

ಪರಮಾತ್ಮ: ಈ ನಾಟಕಕ್ಕೆ ಯಾವುದೇ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಇದೊಂದು ಅವಿನಾಶಿ ಕಾಲಚಕ್ರವಾಗಿದೆ. ಇದು ನಿರಂತರವಾಗಿ ತಿರುಗುತ್ತಲೇ ಇರುತ್ತದೆ. ಈ ಕಾಲಚಕ್ರದಲ್ಲಿ ನಾಲ್ಕು ಯಗಗಳಿವೆ– ಸತ್ಯಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗ. ಈ ನಾಲ್ಕೂ ಯಗಗಳನ್ನು ಸೇರಿಸಿದರೆ ಒಂದು ಕಲ್ಪವಾಗುತ್ತದೆ. ಒಂದು ಕಲ್ಪದ ನಂತರ ಎರಡನೆಯ ಕಲ್ಪ, ಅದರ ನಂತರ ಮೂರನೆಯ ಕಲ್ಪ, ಹೀಗೆ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಪ್ರತಿಯೊಂದು ಯುಗದ ಅವಧಿ 1250 ವರ್ಷವಾಗಿರುತ್ತದೆ. ಈ ಕಾರಣದಿಂದ ಕಲ್ಪದ ಅವಧಿಯು 5000 ವರ್ಷವಾಗುತ್ತದೆ.

ಬಿರಜೂ: ತಾವು ಹೇಳುವ ಮಾತಿನ ಅರ್ಥ– ಕಲಿಯುಗದ ನಂತರ ಪುನಃ ಸತ್ಯಯುಗ ಬರುತ್ತದೆ.

ಪರಮಾತ್ಮ: ಸರಿಯಾಗಿ ಹೇಳಿದೆ. ಕಲಿಯುಗದ ನಂತರ ಪುನಃ ಸತ್ಯಯುಗವು ಬರುತ್ತದೆ. ಮತ್ತು ಈ ಚಕ್ರವು ನಿರಂತರವಾಗಿ ನಡೆಯುತ್ತಿರುತ್ತದೆ. ಈ ಕಾಲಚಕ್ರದ ಎಲ್ಲಕ್ಕಿಂತ ಸುಂದರವಾದ ವಿಚಾರವೆಂದರೆ ಈ ಸೃಷ್ಟಿರೂಪಿ ನಾಟಕವು ಪ್ರತಿ 5000 ವರ್ಷಕ್ಕೊಮ್ಮೆ ತದ್ರೂಪವಾಗಿ ಪುನರಾವರ್ತನೆಯಾಗುತ್ತಿರುತ್ತದೆ.

ಬಿರಜೂ: ಇದರ ಅರ್ಥವೇನು?

ಪರಮಾತ್ಮ: ಇದರ ಅರ್ಥವೇನೆಂದರೆ ಇಂದು ನಿನಗೆ ಏನಾಯಿತೋ ಅದು 5000 ವರ್ಷಗಳ ಹಿಂದೆಯೂ ಆಗಿತ್ತು ಮತ್ತು 5000 ವರ್ಷಗಳ ನಂತರವೂ ಇದೇ ರೀತಿ ಆಗುತ್ತದೆ. ಪ್ರತಿ ಕಲ್ಪದಲ್ಲಿ ಪ್ರತಿಯೊಂದು ಆತ್ಮವು ಒಂದೇ ರೀತಿ ಪಾತ್ರ ಮಾಡುತ್ತದೆ. ಇದೇ ಶಾಶ್ವತ ಸತ್ಯ ಮತ್ತು ಇದು ಈ ಪ್ರಪಂಚದ ಅವಿನಾಶಿ ನಿಯಮವಾಗಿದೆ.



ಬಿರಜೂ: ಇದಂತೂ ತುಂಬಾ ದೊಡ್ಡ ರಹಸ್ಯವಾಗಿದೆ. ಅದನ್ನು ತಾವು ನನಗೆ ತಿಳಿಸಿದಿರಿ. ಹೇ ಪ್ರಭೂ, ತಾವು ನನಗೆ ಯಾವ ನಾಲ್ಕು ಯುಗಗಳ ಬಗ್ಗೆ ತಿಳಿಸಿದಿರಿ, ಆ ನಾಲ್ಕು ಯುಗಗಳಲ್ಲಿ ಏನೇನು ನಡೆಯುತ್ತದೆ?

ಪರಮಾತ್ಮ: ಕಲ್ಪವನ್ನು ಸಮಯಕ್ಕೆ ಅನುಸಾರವಾಗಿ ನಾಲ್ಕು ಯುಗಗಳಾಗಿ ವಿಭಜಿಸಲಾಗಿದೆ. ಎಲ್ಲಕ್ಕಿಂತ ಮೊದಲು ಸತ್ಯಯುಗವಿರುತ್ತದೆ. ಆಗ ಇಡೀ ಸೃಷ್ಟಿಯು ತನ್ನ ಸತೋಪ್ರಧಾನ ರೂಪದಲ್ಲಿರುತ್ತದೆ. ಅಲ್ಲಿ ನಾಲ್ಕೂ ಕಡೆ ಸಂಪೂರ್ಣ ಸುಖ ಮತ್ತು ಶಾಂತಿ ಇರುತ್ತದೆ. ಪ್ರಕೃತಿಯೂ ಸಹ ತನ್ನ ಸತೋಪ್ರಧಾನ ರೂಪದಲ್ಲಿರುತ್ತದೆ. ಅಲ್ಲಿ ಎಲ್ಲ ಮನುಷ್ಯರೂ ಸರ್ವಗುಣ ಸಂಪನ್ನರೂ, 16 ಕಲಾ ಸಂಪೂರ್ಣರೂ ಮತ್ತು ಸಂಪೂರ್ಣ ಪವಿತ್ರರೂ ಆಗಿರುತ್ತಾರೆ. ಈ ಕಾರಣವೇ ಅವರಿಗೆ ದೇವೀದೇವತೆಗಳೆನ್ನಲಾಗುತ್ತದೆ. ಅಲ್ಲಿ ಪಶುಪಕ್ಷಿಗಳೂ ಸಹ ಅಹಿಂಸಕವಾಗಿರುತ್ತವೆ. ಆ ಯುಗದಲ್ಲಿ ಶ್ರೀಲಕ್ಷ್ಮಿ ಮತ್ತು ಶ್ರೀನಾರಾಯಣರ ರಾಜ್ಯವಿರುತ್ತದೆ. ಅಲ್ಲಿ ಒಂದು ರಾಜ್ಯ, ಒಂದು ಭಾಷೆ ಮತ್ತು ಒಂದೇ ಧರ್ಮವಿರುತ್ತದೆ. ಈ ಎಲ್ಲ ಕಾರಣಗಳಿಂದ ಅದಕ್ಕೆ ಸುವರ್ಣಯುಗವೆನ್ನಲಾಗುತ್ತದೆ.

ಇದಾದ ನಂತರ ಪರಮಾತ್ಮನು ಬಿರಜೂಗೆ ಸತ್ಯಯುಗೀ ಸೃಷ್ಟಿಯ ಸಾಕ್ಷಾತ್ಕಾರ ಮಾಡಿಸಿದರು. ಅಲ್ಲಿ ನಾಲ್ಕೂ ಕಡೆ ಹಸಿರೇ ಹಸಿರು. ಅಲ್ಲಲ್ಲಿ ನೀರಿನ ಝರಿಗಳು ಹರಿಯುತ್ತಿದ್ದವು, ಸುಂದರ ಹೂದೋಟಗಳಿದ್ದವು. ಎಲ್ಲ ಕಡೆ ಬಂಗಾರದ ಅರಮನೆಗಳಿದ್ದವು. ಹೂದೋಟಗಳಲ್ಲಿ ದೇವೀದೇವತೆಗಳು ಅತಿ ಸುಂದರ ವಸ್ತ್ರಗಳನ್ನು ಧರಿಸಿ ರಾಸಲೀಲೆಯಾಡುತ್ತಿದ್ದರು. ವಾತಾವರಣದಲ್ಲೆಲ್ಲ ಅನೇಕ ಹೂಗಳ ಸುಗಂಧವು ಹರಡಿತ್ತು. ಪಕ್ಷಿಗಳ ಕಲರವವು ಯಾವುದೋ ಮಧುರ ಸಂಗೀತದಂತೆ ಕೇಳಿಬರುತ್ತಿತ್ತು. ಆಕಾಶದಲ್ಲಿ ಕೆಲವು ಪುಷ್ಪಕ ವಿಮಾನಗಳು ಹಾರುತ್ತಿದ್ದವು. ಒಂದು ನದಿಯ ದಡದಲ್ಲಿ ಹುಲಿ ಮತ್ತು ಹಸು ಒಟ್ಟಿಗೆ ನೀರು ಕುಡಿಯುತ್ತಿದ್ದವು. ಇಷ್ಟೊಂದು ಸುಂದರವಾದ ಸೃಷ್ಟಿಯನ್ನು ನೋಡಿ ಬಿರಜೂ ತನ್ನನ್ನು ತಾನೇ ಮರೆತುಬಿಟ್ಟನು. ಆತನು ಆ ಸ್ವರ್ಣಿಮ ದೃಶ್ಯಗಳಲ್ಲಿ ಮುಳುಗಿಹೋದನು.

ಬಿರಜೂ: ಎಷ್ಟೊಂದು ಮನಮೋಹಕವಾದ ಪ್ರಪಂಚವಾಗಿದೆ. ಇಲ್ಲಿ ಎಲ್ಲರೂ ಎಷ್ಟೊಂದು ಸುಖಿಯಾಗಿದ್ದಾರೆ. ಇದರ ನಂತರ ಏನಾಗುತ್ತದೆ?

ಪರಮಾತ್ಮ: ಪರಿವರ್ತನೆಯಂತೂ ಸೃಷ್ಟಿಯ ನಿಯಮವಾಗಿದೆ. ಸಮಯದ ಜೊತೆಜೊತೆಯಲ್ಲಿ ಸೃಷ್ಟಿಯ ಪರಿವರ್ತನೆಯೂ ಆಗುತ್ತ ಹೋಗುತ್ತದೆ. ಸತ್ಯಯುಗದ ನಂತರ ತ್ರೇತಾಯುಗ ಬರುತ್ತದೆ. ಈ ಯುಗದಲ್ಲಿಯೂ ಸಹ ನಾಲ್ಕೂ ಕಡೆ ಸುಖ ಶಾಂತಿ ಇರುತ್ತದೆ. ಆದರೆ ಸತ್ಯಯುಗದ ಹೋಲಿಕೆಯಲ್ಲಿ ಇಲ್ಲಿಯ ಎಲ್ಲ ಮನುಷ್ಯರೂ 14 ಕಲಾ ಸಂಪೂರ್ಣರಾಗಿರುತ್ತಾರೆ. ಈ ಯುಗದಲ್ಲಿ ಶ್ರೀರಾಮ ಮತ್ತು ಶ್ರೀಸೀತೆಯ ರಾಜ್ಯವಿರುತ್ತದೆ. ಈ ಯುಗಕ್ಕೆ ಬೆಳ್ಳಿಯ ಯುಗ ಎನ್ನಲಾಗುತ್ತದೆ. ಸತ್ಯಯುಗ ಮತ್ತು ತ್ರೇತಾಯುಗ – ಈ ಎರಡೂ ಯುಗಗಳನ್ನು ಸೇರಿಸಿ ಸ್ವರ್ಗವೆನ್ನಲಾಗುತ್ತದೆ. ಅಲ್ಲಿ ಪ್ರತಿಯೊಬ್ಬರೂ ಸುಖಿಯಾಗಿರುತ್ತಾರೆ.



ಪರಮಾತ್ಮ:ತ್ರೇತಾಯುಗದ ನಂತರ ದ್ವಾಪರಯುಗ ಬರುತ್ತದೆ. ಈ ಯುಗದಿಂದಲೇ ಸೃಷ್ಟಿಯಲ್ಲಿ ದುಃಖ ಅಶಾಂತಿ ವೃದ್ಧಿಯಾಗತೊಡಗುತ್ತವೆ. ದ್ವಾಪರದಲ್ಲಿ ಪ್ರಕೃತಿಯು ರಜೋಪ್ರಧಾನವಾಗಿಬಿಡುತ್ತದೆ. ಮನುಷ್ಯಾತ್ಮರು 8 ಕಲಾಸಂಪೂರ್ಣರಾಗಿರುತ್ತಾರೆ. ಏಕೆಂದರೆ ಈ ಯುಗದಲ್ಲಿ ದುಃಖಗಳು ಪ್ರಾರಂಭವಾಗುವುದರ ಜೊತೆಜೊತೆಗೆ ಪರಮಾತ್ಮನಾದ ನನ್ನ ಭಕ್ತಿಯೂ ಪ್ರಾರಂಭವಾಗಿಬಿಡುತ್ತದೆ. ಎಲ್ಲಕ್ಕಿಂತ ಮುಂಚೆ ಭಾರತದಲ್ಲಿ ನಿರಾಕಾರ ಶಿವನಾದ ನನ್ನ ಪೂಜೆಯು ಶಿವಲಿಂಗದ ರೂಪದಲ್ಲಿ ನಡೆಯಿತು. ಆದರೆ ಸಮಯ ಕಳೆದಂತೆ ಅವ್ಯಭಿಚಾರಿ ಭಕ್ತಿಯು ವ್ಯಭಿಚಾರಿ ಭಕ್ತಿಯಾಗಿ ಬದಲಾಯಿತು. ಮತ್ತು ಮನುಷ್ಯರು ಅನೇಕ ದೇವೀದೇವತೆಗಳ ಭಕ್ತಿಯನ್ನೂ ಮಾಡತೊಡಗಿದರು. ಇದರ ಜೊತೆಗೆ ಅನೇಕ ಧರ್ಮಗಳ ಸ್ಥಾಪನೆಯೂ ಸಹ ದ್ವಾಪರದಲ್ಲಿಯೇ ಆಯಿತು. ವಿಶ್ವವು ಅನೇಕ ರಾಜ್ಯಗಳಾಗಿ ವಿಂಗಡಣೆಯಾಯಿತು. ಮನುಷ್ಯರು ಭೂಮಿಗಾಗಿ, ಧರ್ಮಕ್ಕಾಗಿ ಅನೇಕ ಯುದ್ಧಗಳನ್ನು ಮಾಡಿದರು. ಈಗ ಸೃಷ್ಟಿಯು ಸತ್ಯಯುಗದ ಆದಿಯಲ್ಲಿದ್ದಂತೆ ಇರಲಿಲ್ಲ. ಪವಿತ್ರರಾಗಿದ್ದ ಮನುಷ್ಯರು ಅಪವಿತ್ರರಾಗಿಬಿಟ್ಟರು. ಕಾಮ,ಕ್ರೋಧ, ಲೋಭ, ಮೋಹ ಮತ್ತು ಅಹಂಕಾರ – ಐದು ವಿಕಾರಗಳು ಎಲ್ಲ ಮನುಷ್ಯರನ್ನು ವಿಕಾರಿಗಳನ್ನಾಗಿ ಮಾಡಿಬಿಟ್ಟಿದ್ದವು. ಇದೇ ರೀತಿ ಸಮಯ ಕಳೆಯುತ್ತ ಹೋಯಿತು. ದ್ವಾಪರಯುಗದ ನಂತರ ಕಲಿಯುಗವು ಪ್ರಾರಂಭವಾಯಿತು. ಈ ಯುಗದಲ್ಲಿ ಆತ್ಮರು ತಮೋಪ್ರಧಾನರೂ ಮತ್ತು ಕಲಾಹೀನರೂ ಆಗಿಬಿಡುತ್ತಾರೆ. ನಾಲ್ಕೂ ಕಡೆ ದುಃಖವೇ ದುಃಖ ಹರಡಿಹೋಗುತ್ತದೆ.

ಬಿರಜೂ: ವರ್ತಮಾನ ಸಮಯದಲ್ಲಿ ಕಲಿಯುಗ ನಡೆಯುತ್ತಿದೆ ಎಂದು ಜನರು ಹೇಳುತ್ತಾರಲ್ಲ?

ಪರಮಾತ್ಮ: ಹೌದು, ವರ್ತಮಾನ ಸಮಯದಲ್ಲಿ ಕಲಿಯುಗವೇ ನಡೆಯುತ್ತಿದೆ. ಇದು ಅಂತಿಮ ಸಮಯದವರೆಗೆ ನಡೆಯುತ್ತದೆ. ಆ ಸಮಯದಲ್ಲಿ ಎಲ್ಲ ಆತ್ಮರೂ ಪರಮಧಾಮದಿಂದ ಬಂದುಬಿಟ್ಟಿರುತ್ತಾರೆ. ಮತ್ತು ಇದೇ ಸಮಯದಲ್ಲಿಯೇ ನಾನೂ ಸಹ ಈ ಧರೆಗೆ ಅವತರಣೆಯಾಗಬೇಕಾಗುತ್ತದೆ. ಹೇಗೆ ನಾನು ನಿನಗೆ ಮುಂಚೆಯೂ ತಿಳಿಸಿದ್ದೆನು– ಕಲಿಯುಗದ ನಂತರ ಸತ್ಯಯುಗವು ಬರುತ್ತದೆ. ಪುನಃ ಸತ್ಯಯುಗವು ಪ್ರಾರಂಭವಾಗುತ್ತದೆ ಮತ್ತು ಒಂದು ಹೊಸ ಕಲ್ಪವು ಪ್ರಾರಂಭವಾಗಿಬಿಡುತ್ತದೆ. ಕಲಿಯುಗ ಮತ್ತು ಸತ್ಯಯುಗದ ನಡುವೆಯ ಸಮಯಕ್ಕೆ ಸಂಗಮಯುಗವೆನ್ನಲಾಗುತ್ತದೆ. ಹಳೆಯ ಕಲ್ಪವು ಸಮಾಪ್ತಿಯಾಗಿ ಹೊಸ ಕಲ್ಪವು ಪ್ರಾರಂಭವಾಗುವ ಆ ಮಂಗಳಕರವಾದ ಕ್ಷಣವು ಈಗ ಬಂದುಬಿಟ್ಟಿದೆ. ಕಲಿಯುಗದ ನಂತರ ಪುನಃ ಹೊಸ ಸತ್ಯಯುಗೀ ಪ್ರಪಂಚದ ಸ್ಥಾಪನೆಯಾಗುತ್ತದೆ. ಆ ಹೊಸ ಪ್ರಪಂಚದ ಸ್ಥಾಪನೆಗಾಗಿಯೇ ನಾನು ಈ ಧರೆಯ ಮೇಲೆ ಬಂದಿದ್ದೇನೆ.



ಬಿರಜೂ: ಇದರ ಅರ್ಥವೇನೆಂದರೆ–ತಾವು ವರ್ತಮಾನ ಸಮಯದಲ್ಲಿ ಈ ಸೃಷ್ಟಿಯಲ್ಲಿ ಅವತರಣೆಯಾಗಿಬಿಟ್ಟಿದ್ದೀರಿ.

ಪರಮಾತ್ಮ: ಹೌದು, ನಾನು ವರ್ತಮಾನ ಸಮಯದಲ್ಲಿ ಈ ಸೃಷ್ಟಿಯಲ್ಲಿ ಅವತರಿತನಾಗಿದ್ದೇನೆ ಎಂಬುದು ಸತ್ಯವಾಗಿದೆ.

ಬಿರಜೂ: ಹೇ ಪ್ರಭೂ, ತಾವು ಯಾವ ರೂಪದಲ್ಲಿ ಅವತರಣೆಯಾಗಿದ್ದೀರಿ? ತಾವು ಯಾವ ರೂಪದಲ್ಲಿ ಜನ್ಮ ಪಡೆದಿದ್ದೀರಿ?

ಪರಮಾತ್ಮ: ನಾನಂತೂ ಅಜನ್ಮ ಆಗಿದ್ದೇನೆ. ನಾನು ಎಂದೂ ಯಾವುದೇ ಮಾತೆಯ ಗರ್ಭದಿಂದ ಜನ್ಮಪಡೆಯುವುದಿಲ್ಲ. ಆದರೆ ನಾನು ನಿರಾಕಾರನಾದ ಕಾರಣ ನನ್ನ ದಿವ್ಯ ಕರ್ತವ್ಯಗಳನ್ನು ಪೂರೈಸಲು ಒಂದು ಅನುಭವೀ ಮನುಷ್ಯನ ಶರೀರದ ಆಧಾರವನ್ನು ಪಡೆದು ಸತ್ಯಯುಗೀ ಸೃಷ್ಟಿಯ ಸ್ಥಾಪನೆಯನ್ನು ಮಾಡುತ್ತೇನೆ.

ಬಿರಜೂ: ತಾವು ಯಾವ ಮನುಷ್ಯ ಶರೀರದ ಮಾಧ್ಯಮದಿಂದ ತಮ್ಮ ದಿವ್ಯ ಕರ್ತವ್ಯವನ್ನು ಮಾಡುತ್ತಿದ್ದೀರೋ ಆ ಭಾಗ್ಯಶಾಲಿ ಮನುಷ್ಯ ಯಾರು?

ಪರಮಾತ್ಮ: ಆ ಭಾಗ್ಯಶಾಲಿ ವ್ಯಕ್ತಿ ಪ್ರಜಾಪಿತ ಬ್ರಹ್ಮಾ. ಸತ್ಯಯುಗದಲ್ಲಿ ಶ್ರೀನಾರಾಯಣನ ರೂಪದಿಂದ ಪಾತ್ರ ಮಾಡಿದ ಆತ್ಮವೇ ಇವರು. ಸರ್ವ ಮನುಷ್ಯಾತ್ಮರಲ್ಲಿ ಇವರೇ ಸರ್ವೋತ್ತಮರು, ಆದ್ದರಿಂದ ನಾನು ಇವರ ತನುವಿನ ಆಧಾರ ಪಡೆದಿದ್ದೇನೆ. ಈ ಸಮಯದಲ್ಲಿ ಇಡೀ ಸೃಷ್ಟಿಯು ತಮೋಪ್ರಧಾನವಾಗಿಬಿಟ್ಟಿದೆ. ಮತ್ತು ಪ್ರತಿಯೊಬ್ಬ ಮನುಷ್ಯಾತ್ಮನೂ ಪತಿತನಾಗಿಬಿಟ್ಟಿದ್ದಾನೆ. ನಾನು ಬಂದಿರುವುದೇ ಎಲ್ಲ ಪತಿತ ಆತ್ಮರನ್ನು ಪಾವನ ಮಾಡಿ ನನ್ನ ಮನೆ ಪರಮಧಾಮಕ್ಕೆ ಕರೆದೊಯ್ಯಲು.

ಬಿರಜೂ: ಏನು? ಈಗ ಸೃಷ್ಟಿಯ ಅಂತ್ಯವು ಬಂದುಬಿಟ್ಟಿದೆಯೇ?

ಪರಮಾತ್ಮ: ಇದು ಸೃಷ್ಟಿಯ ಅಂತ್ಯವಲ್ಲ, ಆದರೆ ಹಳೆಯ ಕಲಿಯುಗೀ ಪ್ರಪಂಚದ ಅಂತ್ಯವಾಗಿದೆ. ಆದರೆ ಜೊತೆಗೆ ಹೊಸ ಸತ್ಯಯುಗೀ ಪವಿತ್ರ ಪ್ರಪಂಚದ ಆರಂಭವೂ ಆಗಿದೆ. ಆ ಪ್ರಪಂಚದ ಒಂದು ಸುಂದರ ದೃಶ್ಯವನ್ನು ನೀನು ನೋಡಿಯೇ ಬಿಟ್ಟಿದ್ದೀಯ. ಸಾಕು, ಹಾಗೆಯೇ ನೋಡುತ್ತ ಹೋಗು. ಬಹಳ ಬೇಗನೆ ಆ ಪ್ರಪಂಚವು ಬರಲಿದೆ ನನ್ನ ಪ್ರೀತಿಯ ಮಗುವೇ.

ಬಿರಜೂ: ಆ ಸತ್ಯಯುಗೀ ಪ್ರಪಂಚದಲ್ಲಿ ಯಾರು ಯಾರು ಹೋಗುತ್ತಾರೆ?



ಪರಮಾತ್ಮ:ಈ ಸಂಗಮಯುಗದಲ್ಲಿ ಯಾರು ನನ್ನನ್ನು ಈ ಸಾಧಾರಣ ರೂಪದಲ್ಲಿಯೂ ಸಹ ಗುರುತಿಸುವರೋ ಮತ್ತು ನನ್ನ ಶ್ರೀಮತದಂತೆ ನಡೆದು ತಮ್ಮ ಜೀವನವನ್ನು ಪುನಃ ದಿವ್ಯ ಮತ್ತು ಪಾವನ ಮಾಡಿಕೊಳ್ಳುವರೋ ಆ ಶ್ರೇಷ್ಠ ಆತ್ಮರೇ ಆ ಸತ್ಯಯುಗೀ ಪ್ರಪಂಚದಲ್ಲಿ ಹೋಗುವರು.

ಬಿರಜೂ: ಹಾಗಾದರೆ ನಾನೂ ಸಹ ಆ ಪ್ರಪಂಚದಲ್ಲಿ ಹೋಗಬಹುದೇ?

ಪರಮಾತ್ಮ: ಏಕಾಗದು? ಬರೀ ನೀನಷ್ಟೇ ಅಲ್ಲ, ಇಡೀ ವಿಶ್ವದ ಪ್ರತಿಯೊಬ್ಬ ಆತ್ಮನೂ ಆ ಪ್ರಪಂಚದಲ್ಲಿ ಹೋಗಬಹುದು. ಒಂದು ವೇಳೆ ನಾನು ತಿಳಿಸಿರುವ ಶ್ರೀಮತದ ಮೇಲೆ ನಡೆದರೆ ನೀನೂ ಸಹ ಸತ್ಯಯುಗದಲ್ಲಿ ಹೋಗಬಲ್ಲೆ.

ಬಿರಜೂ: ಹೇ ಪ್ರಭೂ, ನಾನು ಆ ಸತ್ಯಯುಗೀ ಪ್ರಪಂಚದ ಮಾಲೀಕನಾಗಬೇಕೆಂದರೆ ಅದಕ್ಕಾಗಿ ತಮ್ಮ ಶ್ರೀಮತವೇನಿದೆ?

ಪರಮಾತ್ಮ: ನನ್ನ ಮುಖ್ಯ ಶ್ರೀಮತವಾಗಿದೆ– ರಾಜಯೋಗ.

ಬಿರಜೂ: ರಾಜಯೋಗವೇ? ಹಾಗೆಂದರೇನು?

ಪರಮಾತ್ಮ: ರಾಜಯೋಗವು ಎಲ್ಲ ಯೋಗಗಳಿಗೆ ರಾಜನಾಗಿದೆ. ಇದೇನೂ ಕಠಿಣವಾದ ಶಾರೀರಿಕ ಕ್ರಿಯೆಯಾಗಲಿ ಅಥವಾ ಹಠಯೋಗವಾಗಲಿ ಅಲ್ಲ. ಆದರೆಅತ್ಯಂತ ಸರಳವಾದ ಧ್ಯಾನದ ಸಾಧನವಾಗಿದೆ. ನಿನ್ನ ಮನಸ್ಸನ್ನು ನನ್ನ ನೆನಪಿನಲ್ಲಿ ಏಕಾಗ್ರ ಮಾಡುವುದೇ ರಾಜಯೋಗವಾಗಿದೆ. ಸ್ವಯಂಅನ್ನು ಆತ್ಮ ರೂಪದಲ್ಲಿ ಸ್ಥಿತ ಮಾಡಿಕೊಂಡು ನನ್ನನ್ನು ಸತ್ಯ ಸ್ವರೂಪ, ಜ್ಯೋತಿ ರೂಪದಲ್ಲಿ ನೆನಪು ಮಾಡುವುದೇ ರಾಜಯೋಗದ ವಿಧಿಯಾಗಿದೆ. ಈ ವಿಧಿಯಿಂದ ಆತ್ಮದ ಮನದ ತಂತಿಯು ನನ್ನೊಂದಿಗೆ ಜೋಡಣೆಯಾಗಿಬಿಡುತ್ತದೆ. ಇದರಿಂದ ನನ್ನ ಮೂಲಕ ಅಪಾರ ಶಕ್ತಿಗಳು ರಾಜಯೋಗಿಯ ಆಂತರ್ಯದಲ್ಲಿ ಸಮಾವೇಶವಾಗಲು ಪ್ರಾರಂಭವಾಗುತ್ತದೆ. ರಾಜಯೋಗದ ನಿರಂತರ ಅಭ್ಯಾಸದಿಂದ ಆತ್ಮವು ಪಾವನವಾಗುತ್ತ ಹೋಗುತ್ತದೆ. ಮತ್ತು ಇದರ ಜೊತೆಗೆ ಹಿಂದಿನ ಎಲ್ಲ ಪಾಪಕರ್ಮಗಳೂ ಸಹ ನಾಶವಾಗುತ್ತ ಹೋಗುತ್ತವೆ.

ಬಿರಜೂ: ಏನು? ರಾಜಯೋಗದಿಂದ ನಾನು ಮಾಡಿರುವ ಪಾಪಕರ್ಮಗಳೂ ನಾಶವಾಗುತ್ತವೆಯೇ?

ಪರಮಾತ್ಮ: ಹೌದು, ನಿನ್ನ ತಲೆಯ ಮೇಲೆ ಏನೆಲ್ಲ ಪಾಪಗಳ ಭಾರವಿದೆ ಅದು ರಾಜಯೋಗದಿಂದ ಸಮಾಪ್ತಿಯಾಗಿಬಿಡುತ್ತದೆ, ಮತ್ತು ನೀನು ಪುನಃ ಪುಣ್ಯಾತ್ಮನಾಗಿಬಿಡುತ್ತೀಯ.



ಬಿರಜೂ:ಇದಂತೂ ತುಂಬಾ ಸಂತೋಷದ ಸಂಗತಿಯಾಗಿದೆ. ಕೊನೆಗೂ ನಾನು ಹಿಂದೆ ಮಾಡಿದ ಪಾಪಕರ್ಮಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಸಾಧ್ಯವಿದೆ ಎಂದಾಯಿತು. ಆಗಿನಿಂದಲೂ ನನ್ನ ವಿಕರ್ಮಗಳಿಗೆ ಪ್ರಾಯಶ್ಚಿತ್ತ ಹೇಗೆ ಮಾಡಿಕೊಳ್ಳಬೇಕೆಂದು ಯೋಚಿಸುತ್ತ ಮನಸ್ಸಿನಲ್ಲಿಯೇ ಗಾಬರಿಯಾಗಿದ್ದೆನು. ಹೇ ಪರಮೇಶ್ವರ, ತಾವು ನನಗೆ ದಿವ್ಯವಾದ ಜ್ಞಾನಮಾರ್ಗವನ್ನು ತೋರಿಸಿದ್ದಕ್ಕೆ ನಾನು ನಿಮಗೆ ತುಂಬಾ ಋಣಿಯಾಗಿದ್ದೇನೆ.

ಪರಮಾತ್ಮ: ನಾನಂತೂ ನಿನ್ನ ತಂದೆಯಾಗಿದ್ದೇನೆ, ಇದಂತೂ ನನ್ನ ಕರ್ತವ್ಯವಾಗಿತ್ತು.

ಬಿರಜೂ: ಹೇ ಪ್ರಭೂ, ನಾನು ಈ ಜನ್ಮದಲ್ಲಿ ತಮ್ಮನ್ನು ಸಾಕಾರ ರೂಪದಲ್ಲಿಯೂ ಸಹ ಭೇಟಿಯಾಗಬಹುದೇ?

ಪರಮಾತ್ಮ: ನನ್ನನ್ನು ಸತ್ಯಹೃದಯದಿಂದ ಹುಡುಕುವ ಪ್ರಯತ್ನ ಮಾಡಬೇಕು. ನಾನು ನಿನಗೆ ಖಂಡಿತ ಸಿಕ್ಕಿಬಿಡುವೆ. ಬಹು ಬೇಗನೆ ನೀನು ಕೆಲವು ಆತ್ಮರನ್ನು ಕಾಣುವೆ. ಅವರು ನಿನಗೆ ನನ್ನೊಂದಿಗೆ ಭೇಟಿಯಾಗುವ ಸರಿಯಾದ ಮಾರ್ಗವನ್ನು ತಿಳಿಸುವರು.

ಬಿರಜೂ: ಆ ಆತ್ಮರು ಯಾರು? ಅವರನ್ನು ನಾನು ಹೇಗೆ ಗುರುತಿಸಬೇಕು?

ಪರಮಾತ್ಮ: ನೀನು ಕೇವಲ ನನ್ನನ್ನು ಸತ್ಯಹೃದಯದಿಂದ ಪ್ರಾಪ್ತಿ ಮಾಡಿಕೊಳ್ಳುವ ಇಚ್ಛೆ ಇಟ್ಟುಕೊಂಡರೆ ಸಾಕು, ನಿನಗೆ ನಾನು ಖಂಡಿತ ಸಿಗುತ್ತೇನೆ. ಆ ಆತ್ಮರು ಒಂದು ದಿನ ನನ್ನ ಸಂದೇಶವನ್ನು ತೆಗೆದುಕೊಂಡು ನಿನ್ನ ಬಳಿ ಬರುತ್ತಾರೆ. ಆಗ ಅವರನ್ನು ನೀನು ಅವರನ್ನು ಗುರುತಿಸುವೆಯೋ ಇಲ್ಲವೋ ಎಂಬುದು ನಿನ್ನ ಮೇಲಿದೆ. ಈಗ ನಾನು ನಿನ್ನಿಂದ ವಿದಾಯ ತೆಗೆದುಕೊಳ್ಳುತ್ತೇನೆ. ನಿನಗೆ ಕರ್ಮಗಳ ಜ್ಞಾನ ಬಂದಿದೆ ಎಂದು ಭಾವಿಸುತ್ತೇನೆ. ನಾನಿನ್ನು ಹೊರಡುತ್ತೇನೆ, ಸದಾ ಸುಖಿಯಾಗಿರು.

ಇಷ್ಟು ಹೇಳುತ್ತಲೇ ಪರಮಾತ್ಮ ಅದೃಶ್ಯರಾದರು. ಬಿರಜೂ ಅವರನ್ನು ತಡೆಯುವ ಪ್ರಯತ್ನ ಮಾಡಿದರೂ ಅವರನ್ನು ತಡೆಯಲಾಗಲಿಲ್ಲ. ಅಷ್ಟು ಹೊತ್ತಿಗೆ ಆತನಿಗೆ ನಿದ್ರೆಯಿಂದ ಎಚ್ಚರವಾಯಿತು. ತಾನು ತನ್ನ ಗುಡಿಸಲಲ್ಲಿರುವುದು ಅರಿವಾಯಿತು. ಬೆಳಕು ಹರಿದಿತ್ತು. ಸೂರ್ಯನ ಕಿರಣಗಳು ಕಿಟಕಿಯಿಂದ ತೂರಿ ಬಂದು ಬಿರಜೂನ ಮೇಲೆ ಬೀಳುತ್ತಿದ್ದವು. ಅದುವರೆಗೆ ತಾನು ಏನೇನು ಅನುಭವ ಮಾಡಿದ್ದನೋ ಅದು ಕನಸೆಂದು ಆತನ ಅರಿವಿಗೆ ಬಂದಿತು. ಬಿರಜೂನ ಮುಖದಲ್ಲಿ ಈಗ ಒಂದು ಮಂದಹಾಸವಿತ್ತು. ಮನಸ್ಸಿನಲ್ಲಿಯೇಆತನು ತನ್ನೊಂದಿಗೆ ತಾನು ಮಾತಾಡಿಕೊಳ್ಳುತ್ತಿದ್ದನು.

ಬಿರಜೂ: ಏನು? ಇದೆಲ್ಲ ಸ್ವಪ್ನವೇ? ಆದರೆ ಅದೇನೇ ಇರಲಿ, ತುಂಬಾ ಅಲೌಕಿಕ ಅನುಭವವಾಗಿತ್ತು. ಅವರು ಸ್ವಯಂ ಪರಮಾತ್ಮನೇ ಆಗಿದ್ದರು, ನನಗೆ ಇಷ್ಟೊಂದು ಶ್ರೇಷ್ಠವಾದ ಜ್ಞಾನವನ್ನು ಕೊಟ್ಟು ಹೊರಟುಹೋದರು. ನಾನು ಎಷ್ಟೊಂದು ಭಾಗ್ಯಶಾಲಿಯಾಗಿದ್ದೇನೆ. ಆ ಸತ್ಯಯುಗದ ದೃಶ್ಯಗಳು... ಆ ಆತ್ಮಿಕ ಅನುಭವ... ಅದೆಲ್ಲ ಎಷ್ಟೊಂದು ಅದ್ಭುತವಾಗಿತ್ತು.



ಬಿರಜೂ ತನ್ನ ಅಲೌಕಿಕ ಅನುಭವಗಳ ಸ್ಮರಣೆ ಮಾಡುತ್ತಲೇ ಇದ್ದನು. ಆಗ ಆತನ ಪತ್ನಿ ರಮಾ ಅಲ್ಲಿಗೆ ಬಂದು ಸಿಟ್ಟಿನಿಂದ ಬೆದರಿಸಿದಳು.

ರಮಾ: ಏನಾಯ್ತು? ಇಷ್ಟೊಂದು ಸಂತೋಷವಾಗಿದ್ದೀಯಲ್ಲ? ನಿನ್ನೆಯ ಏಟುಗಳನ್ನು ಮರೆತುಬಿಟ್ಟೆಯಾ? ನಿನ್ನೆಯಿಂದ ಮನೆಯಲ್ಲಿ ಒಂದು ಕಾಳೂ ಇಲ್ಲ. ಮತ್ತೆ ನೀನಿಲ್ಲಿ ನಗುತ್ತ ಕುಂತಿದ್ದೀಯ, ನಿನಗಂತೂ ಯಾವುದೇ ಮಾತಿನ ಚಿಂತೆಯಿಲ್ಲ.

ಆದರೆ ಬಿರಜೂ ಇನ್ನೂ ನಗುತ್ತಲೇ ಇದ್ದನು. ಆತನಿಗೆ ಎಂತಹ ದಿವ್ಯವಾದ ಅನುಭವವಾಗಿತ್ತೋ ಅದನ್ನು ರಮಾಳಿಗೂ ಹೇಳಲು ಪ್ರಾರಂಭಿಸಿದನು.

ಬಿರಜೂ: ಅರೆ! ಇದೆಲ್ಲ ಕೆಲಸಕ್ಕೆ ಬಾರದ ಮಾತುಗಳನ್ನು ಬಿಟ್ಟುಬಿಡು, ಇಂದು ನನ್ನ ಕನಸಿನಲ್ಲಿ ಯಾರು ಬಂದಿದ್ದರು ಗೊತ್ತೇ?

ರಮಾ: ನೀನಂತೂ ಸ್ವಯಂ ಭಗವಂತನೇ ನಿನ್ನ ಕನಸಿನಲ್ಲಿ ಬಂದಂತೆ ಕೇಳುತ್ತಿದ್ದೀಯಲ್ಲ?

ಬಿರಜೂ: ಅರೆ! ನೀನಂತೂ ಸರಿಯಾಗಿ ಊಹಿಸಿದೆ. ಇಂದು ನನ್ನ ಕನಸಿನಲ್ಲಿ ಸ್ವಯಂ ಭಗವಂತನೇ ಬಂದಿದ್ದರು. ಪರಮಾತ್ಮನು ನನಗೆ ತುಂಬಾ ಅಲೌಕಿಕ ಮತ್ತು ಅಪೂರ್ವವಾದ ಅನುಭವ ಮಾಡಿಸಿದರು. ಅವರು ನನಗೆ ಕರ್ಮಗಳ ಗುಹ್ಯ ರಹಸ್ಯಗಳ ಜ್ಞಾನ ನೀಡಿದರು. ಅವರು ನನಗೆ ಬರಲಿರುವ ಹೊಸ ಪ್ರಪಂಚದ ಸಾಕ್ಷಾತ್ಕಾರ ಮಾಡಿಸಿದರು. ಇನ್ನೂ ಬಹಳಷ್ಟು ದಿವ್ಯ ಅನುಭವಗಳನ್ನು ಮಾಡಿಸಿದರು. ಅವರು ಈಗ ಈ ಭೂಮಿಯ ಮೇಲೆ ಅವತರಣೆಯಾಗಿಬಿಟ್ಟಿದ್ದಾರೆ ಎಂಬುದು ನಿನಗೆ ಗೊತ್ತಿದೆಯೇ? ಒಂದು ವೇಳೆ ಸತ್ಯ ಮನಸ್ಸಿನಿಂದ ಆತನನ್ನು ಪ್ರಾಪ್ತಿ ಮಾಡಿಕೊಳ್ಳುವ ಇಚ್ಛೆ ಇಟ್ಟುಕೊಂಡರೆ ಅವರು ನನಗೆ ಖಂಡಿತ ಸಿಕ್ಕಿಬಿಡುತ್ತಾರೆ ಎಂದು ಹೇಳಿದ್ದಾರೆ.

ಬಿರಜೂ ತುಂಬಾ ಆನಂದದಿಂದ ಎಲ್ಲ ಮಾತುಗಳನ್ನು ತಿಳಿಸುತ್ತ ಹೋದನು. ಆದರೆ ಆತನ ಸಿಟ್ಟು–ಸಿಡುಕಿನ ಹೆಂಡತಿಗೆ ಆತನ ಯಾವ ಮಾತೂ ಗೊತ್ತಾಗಲಿಲ್ಲ. ಬದಲಾಗಿ ಆಕೆಗೆ ಬಿರಜೂ ಹುಚ್ಚನಾಗಿದ್ದಾನೆ ಎಂದೇ ಅನಿಸಿತು.

ರಮಾ: ಏನು ತಲೆಯಿಲ್ಲದ ಮಾತಾಡುತ್ತಿದ್ದೀಯ? ನನಗೇನೂ ತಿಳಿಯುತ್ತಾ ಇಲ್ಲ. ನಿನ್ನೆ ಆ ಗೂಂಡಾಗಳು ನಿನಗೆ ತಲೆಗೆ ಹೊಡೆದಿರಬೇಕು. ಆದ್ದರಿಂದ ನೀನು ಹುಚ್ಚರಂತೆ ಮಾತಾಡುತ್ತಿದ್ದೀಯ.

ಬಿರಜೂ: ಇಲ್ಲ ಇಲ್ಲ. ನಾನು ಹುಚ್ಚನಲ್ಲ. ನನಗೆ ನಿಜವಾಗಲೂ ಈ ದಿವ್ಯ ಅನುಭವಗಳಾಗಿವೆ.

ರಮಾ: ಈಗ ಅದೆಲ್ಲ ಬಿಟ್ಟು ಏಳು. ಏನಾದರೂ ಸಂಪಾದಿಸಿಕೊಂಡು ಬಾ. ನನ್ನ ತಲೆ ಕೆಡಿಸಬೇಡ.



ಈಗ ಬಿರಜೂಗೆ ತನ್ನ ಪತ್ನಿಯ ಯಾವ ಮಾತುಗಳೂ ಕೆಟ್ಟದೆನಿಸಲಿಲ್ಲ. ಆತನಿಗೆ ಕರ್ಮಗಳ ಜ್ಞಾನ ಸಿಕ್ಕಿಬಿಟ್ಟಿತ್ತು. ಆತನಿಗಂತೂ ಈಗ ರಮಾಳ ಮೇಲೆ ತುಂಬಾ ದಯೆ ಬಂದಿತ್ತು. ಹಿಂದಿನ ಜನ್ಮದಲ್ಲಿ ತಾನು ಆಕೆಯ ಆತ್ಮಕ್ಕೆ ಏನೆಲ್ಲ ಕೇಡು ಮಾಡಿದ್ದನು ಅದರ ಹೋಲಿಕೆಯಲ್ಲಿ ಇದೇನೂ ಆಗಿರಲಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು ಆತನು ತನ್ನ ಪತ್ನಿಯೊಂದಿಗೆ ಕ್ಷಮೆಯಾಚಿಸಿದನು.

ಬಿರಜೂ: ಒಂದು ವೇಳೆ ನಿನಗೆ ನನ್ನ ಮಾತಿನ ಬಗ್ಗೆ ವಿಶ್ವಾಸವಿಲ್ಲವೆಂದರೆ ಏನೂ ಪರವಾಗಿಲ್ಲ. ಆದರೆ ಇಷ್ಟು ತಿಳಿದುಕೋ, ಈಗ ನನ್ನ ಜೀವನ ಪೂರ್ತಿ ಬದಲಾಗಿ ಹೋಗಿದೆ. ನಾನು ಹಿಂದಿನ ಜನ್ಮದಲ್ಲಿ ಮತ್ತು ಈ ಜನ್ಮದಲ್ಲಿ ನಿನಗೆ ಬಹಳ ಕೇಡು ಮಾಡಿದ್ದೇನೆ. ಆದ್ದರಿಂದ ನಾನು ಅದಕ್ಕಾಗಿ ಕ್ಷಮೆಯಾಚಿಸುತ್ತೇನೆ.

ರಮಾಳಿಗಂತೂ ಬಿರಜೂ ಏಕೆ ಕ್ಷಮೆಯಾಚಿಸುತ್ತಿದ್ದಾನೆ ಎಂಬುದು ಸ್ವಲ್ಪವೂ ಗೊತ್ತಾಗಲಿಲ್ಲ. ಸ್ವಲ್ಪ ಹೊತ್ತು ಆಕೆ ಸುಮ್ಮನಿದ್ದಳು. ಮತ್ತು ಇದೇ ಮಾತುಗಳನ್ನು ಯೋಚಿಸುತ್ತ ತನ್ನ ಕೆಲಸಗಳಲ್ಲಿ ತೊಡಗಿಬಿಟ್ಟಳು.

ಇಂದು ಬಿರಜೂ ತುಂಬಾ ಖುಷಿಯಾಗಿದ್ದನು. ನಿನ್ನೆಯ ದಿನ ಆತನಿಗೆ ಏನೆಲ್ಲ ಕೆಡುಕಾಗಿತ್ತು, ಆ ಎಲ್ಲ ಮಾತುಗಳನ್ನು ಆತನು ಮರೆತುಬಿಟ್ಟಿದ್ದನು. ಎಷ್ಟರಮಟ್ಟಿಗೆ ಎಂದರೆ ನಿನ್ನೆ ಬಿದ್ದಿದ್ದ ಏಟುಗಳ ನೋವೂ ಸಹ ಗೊತ್ತಾಗಲಿಲ್ಲ.

ಈಗ ಆತನ ಮನದಲ್ಲಿ ಪರಮಾತ್ಮನನ್ನು ಪ್ರಾಪ್ತಿ ಮಾಡಿಕೊಳ್ಳುವ ಮಾತು ಮಾತ್ರ ಉಳಿದಿತ್ತು. ಆತನು ಇದೇ ಗುಂಗಿನಲ್ಲಿ ಮನೆಯಿಂದ ಹೊರಹೊರಟನು. ಆತನ ಚೆಹರೆಯಲ್ಲಿ ಖುಷಿಯಿತ್ತು. ಆತನ ನಡೆಯಲ್ಲಿ ಈಗ ಉಲ್ಲಾಸ–ಉತ್ಸಾಹಗಳಿದ್ದವು. ಇದೇ ಮತ್ತಿನಲ್ಲಿ ಆತನು ಸಾಗುತ್ತಿದ್ದಾಗ ಓಣಿಯ ಜನರೆಲ್ಲ ಆತನನ್ನು ನೋಡಿ ಆಶ್ಚರ್ಯಚಕಿತರಾದರು. ಏಕೆಂದರೆ ಬಿರಜೂ ಇಷ್ಟೊಂದು ಆನಂದದಿಂದಿರುವುದನ್ನು ಎಂದೂ ನೋಡಿರಲಿಲ್ಲ. ಎಲ್ಲರ ಮನದಲ್ಲಿ ಒಂದೇ ಪ್ರಶ್ನೆಯಿತ್ತು; ನಿನ್ನೆ ತಾನೆ ಇಷ್ಟೊಂದು ಏಟು ತಿಂದಿದ್ದ ಈತ ದುಃಖಿಯಾಗುವ ಬದಲಿಗೆ ಏಕೆ ಇಷ್ಟೊಂದು ಖುಷಿಯಾಗಿದ್ದಾನೆ? ಅವರೆಲ್ಲ ಯಾರು ಎಲ್ಲಿದ್ದರೋ ಅಲ್ಲಿ ನಿಂತು ಬಿರಜೂನ ಕಡೆ ನೋಡತೊಡಗಿದರು. ಸ್ವಲ್ಪ ಹೊತ್ತು ಇಡೀ ವಾತಾವರಣ ಶಾಂತವಾಗಿಬಿಟ್ಟಿತು. ಈಗ ಬಿರಜೂಗೆ ಯಾವುದೇ ಮಾತಿನ ಚಿಂತೆಯಿರಲಿಲ್ಲ. ಆತನು ತನ್ನ ಮತ್ತಿನಲ್ಲಿ ತಾನು ನಡೆದು ಹೋಗುತ್ತಿದ್ದನು.



ಆತನು ತನ್ನ ಅಂಗಡಿಯನ್ನು ಪುನಃ ಪ್ರಾರಂಭಿಸಿದನು. ಇಂದು ಆತನು ಎಲ್ಲರೊಂದಿಗೆ ಮುಗುಳ್ನಗುತ್ತ ಇದ್ದನು. ಜೊತೆಗೆ ಆತನ ಮನದಲ್ಲಿ ಯಾವಾಗ ತಾನು ಪರಮಾತ್ಮನೊಂದಿಗೆ ಮತ್ತೊಮ್ಮೆ ಭೇಟಿಯಾದೇನು ಎಂಬ ವಿಚಾರವೇ ನಡೆಯುತ್ತಿತ್ತು. ಆತನು ಪ್ರತಿಯೊಬ್ಬರನ್ನೂ ಇವರು ಪರಮಾತ್ಮನ ಸಂದೇಶವನ್ನು ತಂದಿರಬಹುದೇ? ಎಂಬ ದೃಷ್ಟಿಯಿಂದಲೇ ನೋಡುತ್ತಿದ್ದನು.

ಮಧ್ಯಾಹ್ನದ ಹೊತ್ತಿಗೆ ಆತನ ಅಂಗಡಿಗೆ ಹಿಂದಿನ ದಿನ ತನ್ನನ್ನು ಚೆನ್ನಾಗಿ ಹೊಡೆದಿದ್ದ ಗೂಂಡಾಗಳೇ ಪುನಃ ಬಂದರು. ಅವರನ್ನು ಕಂಡು ಬಿರಜೂಗೆ ಒಂದು ಕ್ಷಣ ಆವೇಶ ಬಂದಿತು. ಆದರೆ ಆತನಿಗೆ ತಕ್ಷಣವೇ ತಾನು ಅವರೊಂದಿಗೆ ಹೇಗೆ ನಡೆದುಕೊಂಡಿದ್ದೆನು ಎಂಬ ತನ್ನ ಹಿಂದಿನ ಜನ್ಮದ ಮಾತು ನೆನಪಿಗೆ ಬಂದಿತು. ಕ್ಷಣಮಾತ್ರದಲ್ಲಿ ಆತನ ಮನಃಸ್ಥಿತಿ ಬದಲಾಯಿತು. ಆತನು ಮುಗುಳ್ನಗುತ್ತ ಆ ಜನರಿಗೆ ಅವರು ಕೇಳದೆಯೇ ಪ್ರೀತಿಯಿಂದ ಕುಳಿತುಕೊಳ್ಳಲು ಹೇಳಿದನು.ಅವರಿಗೆ ಬಿರಜೂ ತುಂಬಾ ಹೆದರಿಬಿಟ್ಟಿದ್ದಾನೆ ಅನಿಸಿತು. ಇದಾದ ನಂತರ ಬಿರಜೂ ಅವರಿಗೆ ತುಂಬಾ ಪ್ರೀತಿಯಿಂದ ಚಹಾ ಕೊಟ್ಟನು. ನಂತರ ಆತನು ಅವರಿಗೆ ಕ್ಷಮೆಯಾಚಿಸಲು ಪ್ರಾರಂಭಿಸಿದನು.

ಬಿರಜೂ: ನಾನು ನಿಮ್ಮೊಂದಿಗೆ ಕ್ಷಮೆ ಕೇಳಿಕೊಳ್ಳುತ್ತೇನೆ. ನಾನು ನಿಮಗೆ ಬಹಳ ಕೇಡು ಬಗೆದಿದ್ದೇನೆ. ದಯಮಾಡಿ ಅದಕ್ಕೋಸ್ಕರ ನನ್ನನ್ನು ಕ್ಷಮಿಸಿಬಿಡಿ.

ಬಿರಜೂನ ಮಾತಿನಲ್ಲಿ ಯಾವುದೇ ಕೃತ್ರಿಮತೆ ಇರಲಿಲ್ಲ. ಆತನು ಹೃತ್ಪೂರ್ವಕವಾಗಿ ಅವರೊಂದಿಗೆ ಕ್ಷಮೆಯಾಚಿಸುತ್ತಿದ್ದನು. ಬಿರಜೂನ ಇಂತಹ ಮಾತುಗಳನ್ನು ಕೇಳಿ ಅವರು ಆಶ್ಚರ್ಯಚಕಿತರಾಗಿ ಒಬ್ಬರಿಗೊಬ್ಬರು ನೋಡಿಕೊಂಡರು. ಅವರೆಲ್ಲರೂ 'ಕೇಡು ಮಾಡಿದವರು ನಾವು, ಆದರೆ ಈತನು ನಮಗೆ ಕ್ಷಮೆ ಕೇಳುತ್ತಿದ್ದಾನಲ್ಲ' ಎಂದು ಯೋಚನೆಯಲ್ಲಿ ಮುಳುಗಿದರು. ಸ್ವಲ್ಪ ಹೊತ್ತು ಅವರು ಸುಮ್ಮನಾಗಿಬಿಟ್ಟರು. ಅಷ್ಟರಲ್ಲಿ ಅವರಲ್ಲೊಬ್ಬನು 'ಯಾವ ಮಾತಿನ ಬಗ್ಗೆ ಕ್ಷಮಿಸಬೇಕು?' ಎಂದು ಕೇಳಿದನು. ಅದಕ್ಕೆ ಬಿರಜೂ ಹೇಳಿದನು;

ಬಿರಜೂ: ನಾನು ಈ ಜನ್ಮದ ಮಾತಿಗೆ ಕೇಳಲಿಲ್ಲ, ಆದರೆ ನನ್ನ ಹಿಂದಿನ ಜನ್ಮದ ಕೆಲವು ತಪ್ಪುಗಳಿಗಾಗಿ ತಮ್ಮಲ್ಲಿ ಕ್ಷಮೆ ಕೇಳುತ್ತಿದ್ದೇನೆ. ತಾವು ನನ್ನನ್ನು ಕ್ಷಮಿಸುವ ಕೃಪೆ ಮಾಡಬೇಕು.

ಆ ಗೂಂಡಾಗಳಿಗೆ ಬಿರಜೂನ ಯಾವ ಮಾತೂ ಅರ್ಥವಾಗಲಿಲ್ಲ. ಅವರಿಗೂ ಬಿರಜೂ ಹುಚ್ಚನಾಗಿದ್ದಾನೆಂದೇ ಅನಿಸಿತು. ಅವರು ಸ್ವಲ್ಪ ಹೊತ್ತು ತಮ್ಮೊಳಗೆ ಮಾತನಾಡಿಕೊಂಡು ಅಲ್ಲಿಂದ ಸುಮ್ಮನೆ ಹೊರಟುಹೋದರು.



ಸಾಯಂಕಾಲವಾಯಿತು. ಇಡೀ ದಿನವನ್ನು ಬಿರಜೂ 'ಬಹುಬೇಗನೆ ತಾನು ಪರಮಾತ್ಮನನ್ನು ಸಾಕಾರ ರೂಪದಲ್ಲಿ ಖಂಡಿತ ಭೇಟಿಯಾಗಬೇಕು' ಎಂಬ ವಿಚಾರದಲ್ಲಿಯೇ ಕಳೆದಿದ್ದನು. ದಿನಾಲೂ ಇಷ್ಟು ಹೊತ್ತಿಗೆ ಆತನು ಅಂಗಡಿಯನ್ನು ಮುಚ್ಚುತ್ತಿದ್ದನು. ಆದರೆ ಇಂದು ಯಾರಾದರೊಬ್ಬರು ತನಗೆ ಪ್ರಭುವಿನ ಸಂದೇಶವನ್ನು ತಂದಾರು ಎಂಬ ಭರವಸೆ ಆತನಿಗಿತ್ತು. ಆದ್ದರಿಂದ ಆತನು ಬಹಳ ಹೊತ್ತು ಅಂಗಡಿಯನ್ನು ಮುಚ್ಚಲಿಲ್ಲ. ಸಾಕಷ್ಟು ಹೊತ್ತು ಕಾದರೂ ಯಾರೂ ಬಾರದ ಕಾರಣ ಅವನು ಅಂಗಡಿಯನ್ನು ಮುಚ್ಚತೊಡಗಿದನು. ಅಷ್ಟು ಹೊತ್ತಿಗೆ ಬಿರಜೂಗೆ ಸ್ವಲ್ಪ ದೂರದಲ್ಲಿ ಒಬ್ಬ ಬಿಳಿಯ ಬಟ್ಟೆಯುಟ್ಟ ಯುವಕನೊಬ್ಬನು ಕರಪತ್ರಗಳನ್ನು ಹಂಚುತ್ತಿದ್ದುದು ಕಾಣಿಸಿತು. ಬಿರಜೂ ಕುತೂಹಲದಿಂದ ತಕ್ಷಣವೇ ಆ ಯುವಕನ ಬಳಿ ಹೋಗಿ ಕೇಳಿದನು.

ಬಿರಜೂ: ಅರೆ! ಅಣ್ಣ, ನೀನು ಯಾವುದರ ಕರಪತ್ರ ಹಂಚುತ್ತಿದ್ದೀಯ?

ಯುವಕ: (ಮುಗುಳ್ನಗುತ್ತ) ಅಣ್ಣ, ಇದರಲ್ಲಿ ಪರಮಾತ್ಮನ ಸಂದೇಶವಿದೆ. ಪರಮಾತ್ಮನು ಈ ಭೂಮಿಗೆ ಬಂದಿದ್ದಾನೆಂಬ ಸಮಾಚಾರ ಇದರಲ್ಲಿದೆ. ಇದನ್ನು ನಾನು ಎಲ್ಲ ಆಸ್ತಿಕ ಜನರಿಗೆ ಹಂಚುವ ಸಲುವಾಗಿ ಬಂದಿದ್ದೇನೆ. ನೀನೂ ಇದನ್ನು ತೆಗೆದುಕೋ.

ಬಿರಜೂಗೆ ಗೊತ್ತಾಗಿಹೋಯಿತು; ಯಾರನ್ನು ಆತನು ಬೆಳಿಗ್ಗೆಯಿಂದ ಎದುರುನೋಡುತ್ತಿದ್ದನೋ ಆ ವ್ಯಕ್ತಿ ಆತನ ಎದುರಿನಲ್ಲಿಯೇ ಇದ್ದಾನೆ. ಬಿರಜೂನ ಮನದಲ್ಲಿ ತುಂಬಾ ಆನಂದವಾಗತೊಡಗಿತು. ಬಿರಜೂ ಆ ಯುವಕನಿಂದ ಒಂದು ಕರಪತ್ರವನ್ನು ತೆಗದುಕೊಂಡನು. ಇಷ್ಟು ಹೇಳಿ ಆ ಯುವಕನೂ ಸಹ ಅಲ್ಲಿಂದ ಹೊರಟುಹೋದನು. ಬಿರಜೂ ಬಹಳ ಹೊತ್ತು ಆ ಯುವಕನು ಹೋಗುತ್ತಿದ್ದುದನ್ನೇ ನೋಡುತ್ತ ನಿಂತನು. ಆನಂದದಿಂದ ಆತನು ತನಗೆ ಓದು ಬರುವುದಿಲ್ಲವೆಂಬುದನ್ನೂ ಸಹ ಮರೆತುಬಿಟ್ಟಿದ್ದನು. ಈಗ ಆತನು ಆ ಕರಪತ್ರವನ್ನು ಹೇಗೆ ಓದಬೇಕು? ಅಷ್ಟು ಹೊತ್ತಿಗೆ ಆ ಯುವಕನೂ ಸಹ ಕಣ್ಮರೆಯಾಗಿ ಹೋಗಿದ್ದನು. ಬಿರಜೂ ಬಹಳ ಹೊತ್ತು ಈ ಜನಸಂದಣಿಯಲ್ಲಿ ಆ ಯುವಕನನ್ನು ಹುಡುಕಿದನು. ಆದರೆ ಆತನು ಸಿಗಲಿಲ್ಲ. ಮತ್ತೆ ಬಿರಜೂಗೆ ಓದು ಬರಹ ಬಲ್ಲ ಪರಿಚಯಸ್ಥನೊಬ್ಬನ ನೆನಪು ಬಂದಿತು. ಆತನು ತಕ್ಷಣವೇ ಆ ಕರಪತ್ರವನ್ನು ತೆಗೆದುಕೊಂಡು ಆ ವ್ಯಕ್ತಿಯ ಬಳಿ ಹೋಗಿ ಅದನ್ನು ಓದಿ ತಿಳಿಸಲು ಕೇಳಿದನು.



ಪರಿಚಯಸ್ಥ: ಅರೆ ಬಿರಜೂ, ಇಂದು ಇಷ್ಟೊಂದು ಖುಷಿಯಾಗಿದ್ದೀಯ, ಏನು ಸಮಾಚಾರ?

ಬಿರಜೂ: ಇಂದು ನನ್ನ ಸಂತೋಷಕ್ಕೆ ಪಾರವೇ ಇಲ್ಲ. ನೋಡಿ, ಯುವಕನೊಬ್ಬ ಈ ಕರಪತ್ರವನ್ನು ಕೊಟ್ಟು ಹೋದನು, ಇದರಲ್ಲಿ ಪರಮಾತ್ಮನ ಸಂದೇಶವಿದೆ ಎಂದು ಹೇಳುತ್ತಿದ್ದನು. ತಾವು ಇದನ್ನು ನನಗೆ ಓದಿ ಹೇಳಬಲ್ಲಿರಾ?

ಪರಿಚಯಸ್ಥ: ಕೊಡು, ಇದರಲ್ಲೇನಿದೆ ಎಂಬುದನ್ನು ನೋಡೋಣ. 'ಏಳಿ, ಎದ್ದೇಳಿ, ಭಾರತದಲ್ಲಿ ಭಗವಂತ ಬಂದಿದ್ದಾನೆ, ಪ್ರಿಯ ಆತ್ಮನೇ, ನಮ್ಮೆಲ್ಲರ ತಂದೆಯಾಗಿರುವ ಪರಮಪಿತ ಶಿವನು ಆತ್ಮರಾದ ನಮ್ಮೆಲ್ಲರನ್ನು ದುಃಖಗಳಿಂದ ಬಿಡಿಸಲು, ಪಾಪಗಳಿಂದ ಮುಕ್ತರನ್ನಾಗಿ ಮಾಡಲು ಪರಮಧಾಮದಿಂದ ಈ ಭೂಮಿಗೆ ಬಂದುಬಿಟ್ಟಿದ್ದಾರೆ, ಆತ್ಮರಾದ ನಮಗೆ ರಾಜಯೋಗವನ್ನು ಕಲಿಸಿ, ಪುನಃ ನಮ್ಮನ್ನು ಪಾವನರನ್ನಾಗಿ ಮಾಡಲು ಪರಮಾತ್ಮ ಬಂದಿದ್ದಾರೆ...

ಪರಿಚಯಸ್ಥನು ಇಷ್ಟು ಓದುತ್ತಿದ್ದಂತೆ ನಗತೊಡಗಿದನು.

ಪರಿಚಯಸ್ಥ:ಬರೀ ಬುರುಡೆ, ಈ ಕರಪತ್ರದಲ್ಲಿ ಬರೀ ಸುಳ್ಳು ಬರೆಯಲಾಗಿದೆ. ಈ ಜನ ನನಗೆ ಗೊತ್ತು. ಇವರು ಬರೀ ಕೆಲಸಕ್ಕೆ ಬಾರದ ಮಾತಾಡುತ್ತಿರುತ್ತಾರೆ. ಜನರನ್ನು ಮೂರ್ಖರನ್ನಾಗಿ ಮಾಡುವುದು ಅವರ ಚಾಳಿಯಾಗಿದೆ. ನೀನು ಇವರ ಮಾತುಗಳಲ್ಲಿ ಹೋಗಬೇಡ. ಇವರು ಮಾಟಮದ್ದು ಮಾಡುತ್ತಾರೆ ಎಂತಲೂ ಕೇಳಿದ್ದೇನೆ. ನೀನು ಇವರಿಂದ ದೂರವಿರು.

ಬಿರಜೂ: ತಾವು ಎಂದಾದರೂ ಅವರ ಹತ್ತಿರ ಹೋಗಿ ನೋಡಿದ್ದೀರಾ?

ಪರಿಚಯಸ್ಥ: ಇಲ್ಲ, ಎಂದೂ ಹೋಗಿಲ್ಲ. ಜನ ಹೇಳಿದ್ದು ನಿನಗೆ ಹೇಳಿದೆ ಅಷ್ಟೆ.

ಬಿರಜೂ: ನೋಡದೆ ಇದೆಲ್ಲ ಸುಳ್ಳು ಎಂದು ಹೇಗೆ ಹೇಳುತ್ತೀರಿ? ನಿಮಗೆ ಗೊತ್ತಿದೆಯೇ? ನಿನ್ನೆ ರಾತ್ರಿ ಕನಸಿನಲ್ಲಿ ನನಗೆ ತುಂಬಾ ಅಲೌಕಿಕ ಅನುಭವವಾಯಿತು. ಅದರಲ್ಲಿ ಸ್ವಯಂ ಪರಮಾತ್ಮನು ನನಗೆ ತಾನು ಈ ಭೂಮಿಯಲ್ಲಿಅವತರಣೆಯಾಗಿದ್ದೇನೆಂದು ತಿಳಿಸಿದ್ದರು. ನಾನಂತೂ ಅಲ್ಲಿ ಖಂಡಿತ ಹೋಗುತ್ತೇನೆ. ತಾವೂ ಸಹ ನನ್ನೊಂದಿಗೆ ಬನ್ನಿ, ಯಾರಿಗೆ ಗೊತ್ತು, ನಿಜವಾಗಲೂ ಪರಮಾತ್ಮನ ಪ್ರಾಪ್ತಿಯಾಗಿಬಿಡಬಹುದು.



ಪರಿಚಯಸ್ಥ: ಇಲ್ಲ ಇಲ್ಲ, ನಾನಂತೂ ಇಂತಹ ವಿಚಾರಗಳಿಂದ ದೂರವಿರುತ್ತೇನೆ. ನನ್ನ ಜೀವನ ಎಲ್ಲಿಯಾದರೂ ಕೆಟ್ಟುಹೋದೀತೆಂದು ನನಗೆ ಭಯವಿದೆ.

ಬಿರಜೂ: ಒಳ್ಳೆಯದು, ಸರಿ. ತಾವು ಬರುವುದಿಲ್ಲವೆಂದರೆ ಬೇಡ, ಆದರೆ ಈ ಕರಪತ್ರದಲ್ಲಿ ಸ್ಥಳದ ವಿಳಾಸವೇನು ಬರೆದಿದೆ ಎಂಬುದನ್ನು ನನಗೆ ಓದಿ ತಿಳಿಸಿರಿ.

ಪರಿಚಯಸ್ಥ: ಆಗಲಿ, ಇಲ್ಲಿ ಕೆಳಗೆ ಒಂದು ವಿಳಾಸವಿದೆ.

ಆತನು ಬಿರಜೂಗೆ ವಿಳಾಸವನ್ನು ಓದಿ ತಿಳಿಸಿದನು. ಇದರ ನಂತರ ಬಿರಜೂ ಒಂಟಿಯಾಗಿ ಆ ಸ್ಥಳದತ್ತ ಹೊರಟನು. ಆತನುಜನರಿಗೆ ವಿಳಾಸವನ್ನು ಕೇಳುತ್ತ ಕೇಳುತ್ತ ಒಂದು ಬ್ರಹ್ಮಾಕುಮಾರಿ ಸೇವಾಕೇಂದ್ರವನ್ನು ತಲುಪಿದನು. ಆತನು ತುಂಬಾ ಆನಂದದಿಂದ ಸೇವಾಕೇಂದ್ರವನ್ನು ಪ್ರವೇಶಿಸಿದನು. ಅಲ್ಲಿ ಬ್ರಹ್ಮಾಕುಮಾರಿ ಸೋದರಿಯರು ಬಿರಜೂನನ್ನು ತುಂಬಾ ಆದರದಿಂದ ಯೋಗದ ಕೊಠಡಿಯಲ್ಲಿ ಕರೆದೊಯ್ದರು. ಅಲ್ಲಿ ಒಬ್ಬ ಬ್ರಹ್ಮಾಕುಮಾರಿ ಸೋದರಿಯು ಯೋಗದಅವಸ್ಥೆಯಲ್ಲಿ ಕುಳಿತಿದ್ದರು. ಜೊತೆಗೆ ಕೆಲವು ಸೋದರ ಸೋದರಿಯರು ಸಹ ಶಾಂತಚಿತ್ತರಾಗಿ ಯೋಗಾಭ್ಯಾಸ ಮಾಡುತ್ತಿದ್ದರು. ಆ ಕೊಠಡಿಯಲ್ಲಿ ಗಾಢವಾದ ಶಾಂತಿಯಿತ್ತು. ಪ್ರತಿಯೊಬ್ಬರ ಮುಖದಲ್ಲಿ ಆತ್ಮೀಯತೆಯಿತ್ತು. ಬಿರಜೂ ಸಹ ಶಾಂತಿಯಿಂದ ಅವರ ನಡುವೆ ಕುಳಿತುಕೊಂಡನು. ಆತನು ತನ್ನ ಜೀವನದಲ್ಲಿ ಎಂದೂ ಇಷ್ಟೊಂದು ಗಾಢವಾದ ಶಾಂತಿಯ ಅನುಭವ ಮಾಡಿರಲಿಲ್ಲ.

ಯೋಗಾಭ್ಯಾಸದ ನಂತರ ಒಬ್ಬ ಬ್ರಹ್ಮಾಕುಮಾರಿ ಸೋದರಿಯು ಬಿರಜೂನನ್ನು ಇನ್ನೊಂದು ಕೋಣೆಗೆ ಕರೆದೊಯ್ದರು. ಅಲ್ಲಿ ಇನ್ನೊಬ್ಬ ಬ್ರಹ್ಮಾಕುಮಾರಿ ಸೋದರಿಯು ಈಶ್ವರೀಯ ಜ್ಞಾನವನ್ನು ಓದಿಹೇಳುತ್ತಿದ್ದರು. ಎಲ್ಲ ಸೋದರಿಯರ ನಿಸ್ವಾರ್ಥಭಾವವನ್ನು ನೋಡಿ ಬಿರಜೂಗೆ ತುಂಬಾ ಸಂತೋಷವಾಯಿತು. ಮತ್ತೆ ಆ ಸೋದರಿಯು ಬಿರಜೂಗೆ ಜ್ಞಾನವನ್ನು ತಿಳಿಸಲು ಪ್ರಾರಂಭಿಸಿದರು. ಅವರು ಮೊದಲು ಪರಮಾತ್ಮನ ಪರಿಚಯವನ್ನು ತಿಳಿಸಿದರು. ನಂತರ ಆತ್ಮದ ಪರಿಚಯ ಕೊಟ್ಟರು. ರಾತ್ರಿ ಕನಸಿನಲ್ಲಿ ಪರಮಾತ್ಮನು ತಿಳಿಸಿದ್ದ ಜ್ಞಾನವನ್ನೇ ಆ ಸೋದರಿಯು ತಿಳಿಸುತ್ತಿದ್ದರು. ಇದು ಪರಮಾತ್ಮನ ಜ್ಞಾನವೇ ಆಗಿದೆ, ಇದೇ ಸತ್ಯ ಜ್ಞಾನ ಎಂದು ಈಗ ಬಿರಜೂಗೆ ಪೂರ್ಣ ವಿಶ್ವಾಸ ಉಂಟಾಯಿತು. ಸೇವಾಕೇಂದ್ರದಲ್ಲಿ ಬಿರಜೂಗೆ ರಾಜಯೋಗವನ್ನೂ ಕಲಿಸಲಾಯಿತು.



ಅಂದಿನಿಂದ ಆತನು ದಿನಾಲೂ ಬ್ರಹ್ಮಾಕುಮಾರಿ ಸೇವಾಕೇಂದ್ರಕ್ಕೆ ಹೋಗತೊಡಗಿದನು. ಈಶ್ವರೀಯ ಜ್ಞಾನವು ಆತನಿಗೆ ತುಂಬಾ ಇಷ್ಟವಾಯಿತು. ರಾಜಯೋಗದ ಅಭ್ಯಾಸದಿಂದ ಆತನ ಜೀವನವು ತುಂಬಾ ಆನಂದಮಯವಾಯಿತು. ಆತನ ಜೀವನವು ಪೂರ್ಣವಾಗಿ ಬದಲಾಗಿತ್ತು. ಮುಂಚೆ ಜುಗುಪ್ಸೆ ಮತ್ತು ಸಿಡುಕಿನ ಸ್ವಭಾವದವನಾಗಿದ್ದ ಬಿರಜೂ ರಮಣಿಕ ಸ್ವಭಾವದವನಾಗಿಬಿಟ್ಟಿದ್ದನು. ಮುಂಚೆ ಸರಾಯಿ ಕುಡಿದು ಜಗಳವಾಡುತ್ತಿದ್ದವನು, ಆ ಚಟದಿಂದ ಮುಕ್ತನಾಗಿ ಸ್ವಚ್ಛ ಜೀವನ ನಡೆಸುತ್ತಿದ್ದನು. ಪರಮಾತ್ಮನ ಶ್ರೀಮತದ ಮೇಲೆ ನಡೆದು ಆತನು ತನ್ನ ಭಾಗ್ಯವನ್ನು ಶ್ರೇಷ್ಠ ಮಾಡಿಕೊಳ್ಳುವುದರಲ್ಲಿ ತೊಡಗಿದ್ದನು. ಕರ್ಮಗಳ ಜ್ಞಾನವು ಆತನ ಜೀವನಕ್ಕೆ ಹೊಸ ದಿಕ್ಕನ್ನು ತೋರಿಸಿತ್ತು.

ಆತನ ಜೀವನದಲ್ಲಾದ ಪರಿವರ್ತನೆಯನ್ನು ಕಂಡು ಆತನ ಪತ್ನಿ ಮತ್ತು ಓಣಿಯ ಕೆಲವು ಜನರು ಆತನಿಂದ ಪ್ರಭಾವಿತರಾಗಿ ಸೇವಾಕೇಂದ್ರಕ್ಕೆ ಹೋಗಿ ಈಶ್ವರೀಯ ಜ್ಞಾನವನ್ನು ಪಡೆದುಕೊಳ್ಳತೊಡಗಿದರು. ಅವರೆಲ್ಲರ ಜೀವನದಲ್ಲಿ ಅನೇಕ ಪ್ರಕಾರದ ಸಕಾರಾತ್ಮಕ ಬದಲಾವಣೆಗಳಾಗತೊಡಗಿದವು.

ಇದಾದನಂತರ ಬಿರಜೂಗೆ ಸಾಕಾರದಲ್ಲಿ ಪರಮಾತ್ಮನ ಮಿಲನ ಮಾಡುವ ಅವಕಾಶವೂ ಒದಗಿಬಂದಿತು. ಆ ದಿನವು ಆತನ ಜೀವನದಲ್ಲಿ ತುಂಬಾ ಆನಂದದ ದಿನವಾಗಿತ್ತು. ಅಂದು ಆತನು ಸ್ವಯಂ ಭಗವಂತನ ಸಮ್ಮುಖದಲ್ಲಿ ಕುಳಿತು ಈಶ್ವರೀಯ ಜ್ಞಾನದ ಶ್ರವಣ ಮಾಡಿದನು. ಪರಮಾತ್ಮನೊಂದಿಗೆ ಮಿಲನ ಮಾಡಿದ ನಂತರ ಭಗವಂತನು ಈ ಧರೆಗೆ ಬಂದು ಹೊಸ ಪ್ರಪಂಚದ ಸ್ಥಾಪನೆ ಮಾಡುತ್ತಿದ್ದಾರೆಂದು ಆತನಿಗೆ ಪೂರ್ಣ ನಿಶ್ಚಯವಾಯಿತು. ಇದಾದ ನಂತರ ಬಿರಜೂ ಸಹ ತನು ಮನ ಧನಗಳಿಂದ ಪೂರ್ಣ ರೀತಿಯಿಂದ ಪರಮಾತ್ಮನ ದಿವ್ಯ ಕರ್ತವ್ಯದಲ್ಲಿ ಸಹಯೋಗಿಯಾದನು.


ಕರ್ಮಗಳ ಗತಿಯ ಜ್ಞಾನವು ಕೇವಲ ಬಿರಜೂಗಾಗಿ ಮಾತ್ರವಲ್ಲ, ಆದರೆ ವಿಶ್ವದ ಪ್ರತಿಯೊಬ್ಬ ಆತ್ಮನಿಗಾಗಿ ಇದೆ. ಕರ್ಮದ ಲೇಖನಿಯ ಮೂಲಕವೇ ಪ್ರತಿಯೊಬ್ಬ ಮನುಷ್ಯನೂ ತನ್ನ ಭಾಗ್ಯವನ್ನು ಬರೆದುಕೊಳ್ಳುತ್ತಾನೆ. ಇನ್ನು ಪರಮಾತ್ಮನೊಂದಿಗೆ ಮಿಲನ ಮಾಡುವ ಬಗ್ಗೆ ಹೇಳುವುದಾದರೆ, ತಾವೂ ಸಹ ಪರಮಾತ್ಮನೊಂದಿಗೆ ಮಿಲನ ಮಾಡಬಹುದು. ತಾವೂ ಸಹ ತಮ್ಮ ಸಮೀಪದ ಬ್ರಹ್ಮಾಕುಮಾರಿ ಸೇವಾಕೇಂದ್ರಕ್ಕೆ ಹೋಗಿ ಈಶ್ವರೀಯ ಜ್ಞಾನವನ್ನು ತಮ್ಮ ಜೀವನದಲ್ಲಿ ಧಾರಣೆ ಮಾಡಿಕೊಂಡು ತಮ್ಮ ಜೀವನವನ್ನು ದಿವ್ಯ ಮತ್ತು ಅಲೌಕಿಕ ಮಾಡಿಕೊಳ್ಳಬಹುದು.

॥ಓಂಶಾಂತಿ॥

# ಕರ್ಮದ ಮರ್ಮವ ತಿಳಿಯೋ ಮಾನವ

ಶ್ರೇಷ್ಠ ಕರ್ಮದ ಸಸಿಯ ನಾಟಿಸು। ನಿನ್ನ ಜೀವನವ ದಿವ್ಯವಾಗಿಸು।
ಕರ್ಮದ ಗತಿಯು ಅತಿ ಬಲಶಾಲಿ। ಈ ಮರ್ಮವನರಿತವ ಅತಿ ಭಾಗ್ಯಶಾಲಿ।
ಶುಭಕರ್ಮಗಳ ಬೀಜವ ಬಿತ್ತು। ಇದೇ ಜೀವನದ ನಿಜ ಸೊತ್ತು।
ಶ್ರೇಷ್ಠ ಕರ್ಮವ ಮಾಡು ಮಾನವ। ನಿನ್ನ ಕರ್ಮವ ನೋಡು ಮಾನವ।
ಮನ ವಚನದಿ ನೋಯಿಸದಂತೆ। ಪುಣ್ಯಕರ್ಮದಿ ಸಾಗು ನೀ ಮುಂದೆ।
ಶ್ರೇಷ್ಠ ಕರ್ಮಗಳ ಅನುಷ್ಠಾನ। ಗುಣಗಳ ದಾನದ ಶ್ರೇಷ್ಠ ವಿಧಾನ।
ಈ ಜಗವೆಲ್ಲವು ಕರ್ಮಕ್ಷೇತ್ರವು। ಇದರಲ್ಲಿರು ನೀ ಕಮಲ ಸಮಾನ।
ದಿವ್ಯ ಕರ್ಮವ ಮಾಡು ಮಾನವ। ಕರ್ಮದ ಮರ್ಮವ ತಿಳಿಯೋ ಮಾನವ।

## ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಪರಿಚಯ




ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ಒಂದು ಅಂತರ್ರಾಷ್ಟ್ರೀಯ ಆಧ್ಯಾತ್ಮಿಕ ಶೈಕ್ಷಣಿಕ ಸಂಸ್ಥೆಯಾಗಿದ್ದು ಇದರ ಸ್ಥಾಪನೆಯನ್ನು ಸ್ವಯಂ ಪರಮಪಿತ ಪರಮಾತ್ಮನು 1936ರಲ್ಲಿ ಪ್ರಜಾಪಿತ ಬ್ರಹ್ಮಾರವರ ಸಾಕಾರ ಮಾಧ್ಯಮದ ಮೂಲಕ ಮಾಡಿದರು. ಈ ಸಂಸ್ಥೆಯು ಭಾರತವನ್ನೊಳಗೊಂಡು ವಿಶ್ವದ 139 ದೇಶಗಳಲ್ಲಿ 8500 ಕ್ಕೂ ಅಧಿಕ ಸೇವಾಕೇಂದ್ರಗಳ ಮಾಧ್ಯಮದಿಂದ ಜನತೆಯ ಆಧ್ಯಾತ್ಮಿಕ ಚೇತನವನ್ನು ವಿಕಾಸಗೊಳಿಸುತ್ತಿದೆ. ಬ್ರಹ್ಮಾಕುಮಾರೀಸ್ ಸಂಸ್ಥೆಯು ವಿಶ್ವಸಂಸ್ಥೆಯ ಸರ್ಕಾರೇತರ ಅಂಗಸಂಸ್ಥೆಯಾಗಿದೆ. ಹಾಗೂ ಯೂನಿಸೆಫ್ ಮತ್ತು ಎಕೋಸೋಕ್‌ಗಳಿಗೆ ಸಲಹಾ ಸದಸ್ಯ ಆಗಿರುತ್ತದೆ. ಇದಕ್ಕೆ ವಿಶ್ವಸಂಸ್ಥೆಯ ಮೂಲಕ ಶಾಂತಿದೂತ ಪ್ರಶಸ್ತಿ ದೊರೆತಿದೆ. ಯಾಂತ್ರಿಕತೆ, ನಗರೀಕರಣ, ಔದ್ಯೋಗಿಕ ಸ್ಪರ್ಧಾತ್ಮಕತೆ, ಮತ್ತು ಆಧುನಿಕತೆಯ ಸಮಸ್ಯೆಗಳಿಗೆ ಹಾಗೂ ಜನಸಾಮಾನ್ಯರ ಸಮಗ್ರ ಉನ್ನತಿಗಾಗಿ –ಒತ್ತಡ ನಿರ್ವಹಣೆ, ಮಹಿಳಾ ಸಶಕ್ತೀಕರಣ, ಸಕಾರಾತ್ಮಕ ವ್ಯಕ್ತಿತ್ವ, ವಾತಾವರಣದ ಸಮತೋಲನ, ಸಂಪೂರ್ಣ ಆರೋಗ್ಯ– ಇಂತಹ ಅನೇಕ ಉಚಿತ ಶೈಕ್ಷಣಿಕ ಶಿಬಿರಗಳನ್ನು ನಡೆಸಲಾಗುತ್ತದೆ. ಈ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲನೆಯು ಸ್ಥಿರಚಿತ್ತವುಳ್ಳವರು ಮತ್ತು ಸದಾ ಪ್ರಜ್ಞಾಪ್ರವಾಹವುಳ್ಳವರೆಂದು ಖ್ಯಾತಿವೆತ್ತವರೂ, ಅದ್ವಿತೀಯ ವ್ಯಕ್ತಿತ್ವವುಳ್ಳವರೂ ಆದ ದಾದಿ ಜಾನಕೀಜಿಯವರ ಮಾರ್ಗದರ್ಶನ ಮತ್ತು ಪರಮಾತ್ಮ ಪಿತನ ಪ್ರೇರಣೆಯಿಂದ ನಡೆಯುತ್ತಿದೆ. ಈ ಸಂಸ್ಥೆಯ ಅಂತರ್ರಾಷ್ಟ್ರೀಯ ಮುಖ್ಯ ಕಛೇರಿಯು ಪಾಂಡವ ಭವನ, ಅಬು ಪರ್ವತವಾಗಿದೆ.

www.brahmakumaris.com
www.bkwsu.org

Kannada Edition